31 May 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸೋಲು ಮತ್ತು ಅವಮಾನ ಇವು ಜೀವನದಲ್ಲಿ ನೆನಪಿನಲ್ಲಿ ಉಳಿಯುವ ವಿಷಯಗಳು!

-ಸ್ನೇಹಾ ಆನಂದ್

info.varthaman@gmail.com



ಕೆ.ರಾಜು ವಿರುದ್ಧ ಮಾತನಾಡುವ ನೈತಿಕತೆ ಜೆಡಿಎಸ್‌ಗಿಲ್ಲ — ಪುಟ ಸಂ. 2



ಚಾಮರಾಜನಗರದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ — ಪುಟ ಸಂ. 3



ರೇವಣ್ಣ, ಯತೀಂದ್ರಗೆ ಸಚಿವ ಸ್ಥಾನ ನೀಡಿ: ಯಲಿಯೂರು ನಾಗಣ್ಣ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 185 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಜೂ.3ಕ್ಕೆ ಡಿಕೆಶಿ ಪಟ್ಟಾಭಿಷೇಕ

## ರಾಜಭವನದ ಗಾಜಿನ ಮನೆಯಲ್ಲಿ ಸರಳ ಸಮಾರಂಭದಲ್ಲಿ ಪದಗ್ರಹಣ


**ಬೆಂಗಳೂರು:** ಡಿ.ಕೆ.ಶಿವಕುಮಾರ್ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಜೂನ್ 3ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅಧಿಕೃತವಾಗಿ ಘೋಷಿಸಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ನಡೆಯುವ ಸರಳ ಸಮಾರಂಭದಲ್ಲಿ ಬುಧವಾರ ಸಂಜೆ 4.05ಕ್ಕೆ ಶುಭಲಗ್ನದಲ್ಲಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಲಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಆರಂಭದಲ್ಲಿ ಪ್ರಮಾಣವಚನ ಸಮಾರಂಭದ ಸ್ಥಳದ ಬಗ್ಗೆ ಗೊಂದಲವಿತ್ತು. ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿರುವ ಭವ್ಯ ಮೆಟ್ಟಿಲುಗಳ ಮುಂದೆ ಇಲ್ಲವೇ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸ್ವೀಕರಿಸಬೇಕೆಂದು ಈ ಮೊದಲು ಮಾತುಕತೆ ನಡೆದಿತ್ತು. ಆದರೆ, ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ ಲೋಕಭವನದಲ್ಲಿ ಸ್ಥಳವನ್ನು ನಿಗದಿಗೊಳಿಸಲಾಗಿದೆ ಎಂದು ಹೇಳಿದರು.

ಡಿ.ಕೆ ಶಿವಕುಮಾರ್ ಅವರು ಮೊದಲ ಬಾರಿಗೆ ಸಿಎಂ ಆಗುತ್ತಿದ್ದರೂ ಯಾವುದೇ ಆಡಂಬರವಿಲ್ಲದೇ ಲೋಕಭವನದಲ್ಲಿ (ರಾಜಭವನ) ಸರಳ ಕಾರ್ಯಕ್ರಮದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಪ್ರಮಾಣವಚನ ಸಮಾರಂಭಕ್ಕೆ ಸಾರ್ವಜನಿಕರಿಗೆ ಪ್ರವೇಶ ಇಲ್ಲ. ನಾವು ಯಾರಿಗೂ ಯಾವುದೇ ಪಾಸ್ ಸಹ ನೀಡುತ್ತಿಲ್ಲ. ತೈಲ ಬೆಲೆ ಏರಿಕೆ

ಪುಟ 2ಕ್ಕೆ




### ಕೈ ಶಾಸಕಾಂಗ ಪಕ್ಷದ ನಾಯಕರಾಗಿ ಡಿಕೆಶಿ ಆಯ್ಕೆ

**ಬೆಂಗಳೂರು:** ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿದ್ದಾರೆ. ಸಿಎಲ್‌ಪಿ ನಾಯಕನಾಗಿ ಡಿಕೆಶಿ ಹೆಸರನ್ನು ಸಿದ್ದರಾಮಯ್ಯ ಪ್ರಸ್ತಾಪಿಸಿದರು. ಜಿ.ಪರಮೇಶ್ವರ್ ಅನುಮೋದಿಸಿದರು. ಶಾಸಕರು ಕೈ ಎತ್ತುವ ಮೂಲಕ ಅನುಮೋದನೆ ನೀಡಿದರು.

ವಿಧಾನಸೌಧದಲ್ಲಿ ಶನಿವಾರ ಸಂಜೆ ನಡೆದ ಸಿಎಲ್‌ಪಿ ಸಭೆಯಲ್ಲಿ ಸಿದ್ದರಾಮಯ್ಯ ಆರಂಭಿಕ ಮಾತುಗಳನ್ನಾಡಿ ಡಿಕೆಶಿ ಆಯ್ಕೆಗೆ ನಿರ್ಣಯ ಮಂಡಿಸಿದರು. ಜೊತೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ಘೋಷಿಸಿದರು. ಸಿದ್ದರಾಮಯ್ಯ

### ಜ್ಯೋತಿಷಿಗಳ ಸಲಹೆಯಂತೆ ಪದಗ್ರಹಣ ಸಮಯ ಆಯ್ಕೆ

**ಬೆಂಗಳೂರು:** ಧಾರ್ಮಿಕ ನಂಬಿಕೆ ಹೊಂದಿರುವ ಡಿ.ಕೆ.ಶಿವಕುಮಾರ್ ಅವರು ತಮ್ಮ ಜ್ಯೋತಿಷಿ ದ್ವಾರಕಾನಾಥ್ ಅವರ ಸಲಹೆಯ ಮೇರೆಗೆ ಪದಗ್ರಹಣಕ್ಕೆ ಜೂನ್ 3 ಅನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜೂನ್ 3 ಅನ್ನು ಪ್ರಮಾಣವಚನ ಸ್ವೀಕಾರಕ್ಕೆ ಶುಭ ಮುಹೂರ್ತ ಎಂದು ಜ್ಯೋತಿಷಿಗಳು ಸೂಚಿಸಿದ್ದಾರೆ. ಅಲ್ಲದೆ, ಜೂನ್ 3ರ ದಿನಾಂಕ ಆಯ್ಕೆಗೆ ಮತ್ತೊಂದು ಕಾರಣವೆಂದರೆ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಲಭ್ಯತೆ. ಅವರು ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಡಿ.ಕೆ.ಶಿವಕುಮಾರ್ ಅವರೊಂದಿಗೆ ಇಬ್ಬರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಅವರಲ್ಲಿ ಒಬ್ಬರು ದಲಿತ ಸಮುದಾಯದಿಂದ ಹಾಗೂ ಮತ್ತೊಬ್ಬರು ಅಲ್ಪಸಂಖ್ಯಾತ ಸಮುದಾಯದಿಂದ ಇರಲಿದ್ದಾರೆ ಎಂದು ಹೇಳಲಾಗಿದೆ.

### ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಪ್ರಸ್ತಾಪವಿಲ್ಲ: ಕೇಂದ್ರ ಸಚಿವ

**ನವದೆಹಲಿ:** ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವ ಅಥವಾ ದೇಶಾದ್ಯಂತ ಗೋಹತ್ಯೆ ನಿಷೇಧಿಸುವ ಯಾವುದೇ ಪ್ರಸ್ತಾಪವನ್ನು ಕೇಂದ್ರ ಸರ್ಕಾರದ ಪರಿಗಣನೆಯಲ್ಲಿಲ್ಲ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ. ಆದಾಗ್ಯೂ, ವಿವಿಧ ಗುಂಪುಗಳು ಅಂತಹ ಬೇಡಿಕೆಗಳನ್ನು ನಿರಂತರವಾಗಿ ಎತ್ತುತ್ತಿವೆ ಎಂದರು.


ಗೋಹತ್ಯೆಗೆ ಸಂಬಂಧಿಸಿದ ಕಾನೂನುಗಳು ರಾಜ್ಯದಿಂದ ರಾಜ್ಯಕ್ಕೆ

ಪುಟ 2ಕ್ಕೆ

### ಸರ್ಕಾರ ರಚನೆಗೆ ರಾಜ್ಯಪಾಲರ ಆಹ್ವಾನ

**ಬೆಂಗಳೂರು:** ಲೋಕಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಶನಿವಾರ ಸಂಜೆ ಡಿ.ಕೆ.ಶಿವಕುಮಾರ್ ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಸರ್ಕಾರ ರಚಿಸಲು ರಾಜ್ಯಪಾಲರು ಡಿಕೆಶಿಗೆ ಆಹ್ವಾನ ನೀಡಿದರು. ಜೂ.3ರಂದು ಸಂಜೆ 4.05ಕ್ಕೆ ಸಿಎಂ ಆಗಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ವಿಧಾನಸೌಧದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ.ಶಿವಕುಮಾರ್ ಆಯ್ಕೆ ಆದರು. ನಂತರ ಸಿದ್ದರಾಮಯ್ಯ ಸೇರಿದಂತೆ 10 ಮಂದಿ ಕಾಂಗ್ರೆಸ್ ನಾಯಕರ ಜೊತೆಗೂಡಿ ಡಿಕೆಶಿ ರಾಜ್ಯಪಾಲರ ಭವನಕ್ಕೆ ತೆರಳಿದರು. ರಾಜ್ಯಪಾಲರ ಬಳಿ ಸಿಎಲ್‌ಪಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.



### ಮಂಡ್ಯ ನಾಯಕರ ಜೊತೆ ಡಿಕೆಶಿ ಮಿಡ್‌ನೈಟ್ ಮೀಟಿಂಗ್



**ಬೆಂಗಳೂರು:** ಡಿ.ಕೆ.ಶಿವಕುಮಾರ್ ರಾಜ್ಯಭಾರಕ್ಕೆ ಕೌಂಟ್‌ಡೌನ್ ಶುರುವಾಗಿದೆ. ಈ ಎಲ್ಲ ಬೆಳವಣಿಗೆಗಳ ಮಧ್ಯೆ ಡಿ.ಕೆ ಶಿವಕುಮಾರ್ ಅವರ ಮಿಡ್‌ನೈಟ್ ಮೀಟಿಂಗ್ ತೀವ್ರ ಕುತೂಹಲ ಕೆರಳಿಸಿದೆ.

ಸಚಿವ ಸಂಪುಟ ರಚನೆ ಕಸರತ್ತು ನಡೆಯುತ್ತಿರುವ ಹೊತ್ತಿನಲ್ಲೇ ಮಂಡ್ಯ ಜಿಲ್ಲೆಯ ಶಾಸಕರು, ಸಚಿವರೊಂದಿಗೆ ಡಿಕೆಶಿ ಮಿಡ್‌ನೈಟ್ ಮೀಟಿಂಗ್ ನಡೆಸಿದ್ದಾರೆ.

ಹೈಕಮಾಂಡ್ ಭೇಟಿ ಬಳಿಕ ದೆಹಲಿಯಿಂದ ಬೆಂಗಳೂರಿಗೆ ಆಗಮಿಸುತ್ತಿದ್ದಂತೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಶುಕ್ರವಾರ ರಾತ್ರಿ ನಿರ್ಗಮಿತ ಸಚಿವ ಚಲುವರಾಯಸ್ವಾಮಿ, ಶಾಸಕ ಗಣಿಗ ರವಿಕುಮಾರ್, ಕದಲೂರು ಉದಯ್ ಅವರೊಂದಿಗೆ ಸುಮಾರು 1 ಗಂಟೆ ಕಾಲ ಮಾತುಕತೆ ನಡೆಸಿದರು. ಅಲ್ಲದೇ ಆಪ್ತರಾದ ಬೇಳೂರು ಗೋಪಾಲಕೃಷ್ಣ, ಯೂತ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಮಾಜಿ ಅಧ್ಯಕ್ಷ ನಲಪಾಡ್ ಅವರೊಂದಿಗೂ ಚರ್ಚೆ ನಡೆಸಿದ್ದಾರೆ.

# ‘ಆಪರೇಷನ್ ಸಿಂಧೂರ 2’ಕ್ಕೆ ಸೇನೆ ಸಿದ್ಧ: ಜನರಲ್ ದ್ವಿವೇದಿ

**ಪುಣೆ:** ಅಗತ್ಯವಿದ್ದಲ್ಲಿ 'ಆಪರೇಷನ್ ಸಿಂದೂರ್ 2.0'ಗೆ ಸಶಸ್ತ್ರ ಪಡೆಗಳು ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಶನಿವಾರ ಹೇಳಿದ್ದಾರೆ.

ಭೂ ಸೇನೆ, ವಾಯುಪಡೆ ಮತ್ತು ನೌಕಾಪಡೆಗಳನ್ನು ಮೀರಿದ ಆಧುನಿಕ ಮಲ್ಟಿ–ಡೊಮೇನ್ ಯುದ್ಧಕ್ಕಾಗಿ ಈ ಮೂರು ಸೇವೆಗಳು ಸಿನರ್ಜಿಯನ್ನು ಹೆಚ್ಚಿಸುತ್ತಿವೆ ಎಂದು ದ್ವಿವೇದಿ ಪ್ರತಿಪಾದಿಸಿದರು.

ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಯಲ್ಲಿ ನಡೆದ 150ನೇ ಕೋರ್ಸ್ನ ಪಾಸಿಂಗ್–ಔಟ್ ಪೆರೇಡ್‌ನ ಸಂದರ್ಭದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಜನರಲ್ ದ್ವಿವೇದಿ, ಪ್ರಸ್ತುತ ಯುದ್ಧದ ಪರಿಸ್ಥಿತಿ ಇಲ್ಲವಾದರೂ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಮೂರು ಸೇನೆಗಳು ತೀವ್ರ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಏಪ್ರಿಲ್‌ನಲ್ಲಿ 26 ಜೀವಗಳನ್ನು ಬಲಿತೆಗೆದುಕೊಂಡ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ




ಭಾರತವು ಮೇ 2025ರಲ್ಲಿ ಪಾಕಿಸ್ತಾನದಲ್ಲಿ ಭಯೋತ್ಪಾದಕ ಮೂಲಸೌಕರ್ಯವನ್ನು ನಾಶಮಾಡಲು ಆಪರೇಷನ್ ಸಿಂದೂರ್ ಎಂಬ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು.

ಆಪರೇಷನ್ ಸಿಂದೂರ್ ಇನ್ನೂ ಮುಂದುವರೆಯುತ್ತಿದೆ. ಇದು ತಾತ್ಕಾಲಿಕವಾಗಿ ನಿಂತಿದೆ. ಭಾರತೀಯ ಸೇನೆ ಮತ್ತು ಎಲ್ಲಾ ಮೂರು ಸೇನೆಗಳು ಕೂಡ ಆಪರೇಷನ್ ಸಿಂದೂರ್ 2.0 ಅಗತ್ಯಬಿದ್ದಲ್ಲಿ ಅದಕ್ಕೆ ಸೂಕ್ತ ಸಿದ್ಧತೆ ನಡೆಸುತ್ತಿವೆ. ಸದ್ಯ ನಾವು ನಮ್ಮ ಮೂರು

ಪುಟ 2ಕ್ಕೆ

# ಸಚಿವ ಸ್ಥಾನಕ್ಕಾಗಿ ಶಾಸಕರ ದುಂಬಾಲು

## ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಮನೆಗೆ ಆಗಮಿಸಿ ಲಾಬಿ ಶುರು

**ಬೆಂಗಳೂರು:** ನೂತನ ಸರ್ಕಾರದಲ್ಲಿ ಸಚಿವ ಸ್ಥಾನ ಪಡೆಯಲು ಶಾಸಕರ ಲಾಬಿ ಶುರುವಾಗಿದೆ. ಈಗಾಗಲೇ ಸಚಿವರಾಗಿದ್ದವರು ತಮ್ಮ ಸ್ಥಾನ ಉಳಿಸಿಕೊಳ್ಳಲು ಲಾಬಿ ಆರಂಭಿಸಿದ್ದಾರೆ.

ಹೈಕಮಾಂಡ್ ನಾಯಕರ ಬಳಿ ಕೆಲವರು ಲಾಬಿ ಮಾಡುತ್ತಿದ್ದಾರೆ. ನೂತನ ಸಿಎಂಗೆ ಅಭಿನಂದನೆ ಹೇಳುವ ನೆಪದಲ್ಲಿ ಕೆಲವರು ಡಿಕೆಶಿ ಮನೆಗೂ ಭೇಟಿ ಕೊಡುತ್ತಿದ್ದಾರೆ. ಮತ್ತೊಂದು ಕಡೆ ಹಂಗಾಮಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿ ಸಚಿವ ಸ್ಥಾನ ಕೊಡಿಸಿ ಅಂತ ದುಂಬಾಲು ಬಿದ್ದಿದ್ದಾರೆ.

ಕಾಂಗ್ರೆಸ್‌ನಲ್ಲಿ ಹೊಸ ಸರ್ಕಾರದ ರಚನೆ ಪ್ರಕ್ರಿಯೆ ಶುರುವಾಗಿದೆ. ಹೊಸ ಸರ್ಕಾರದಲ್ಲಿ ಮಂತ್ರಿ ಆಗಲು ಶಾಸಕರು ಲಾಬಿ ಶುರು ಮಾಡಿದ್ದಾರೆ. ಮಂತ್ರಿ ಪದವಿ ಪಡೆಯಲು ಅನೇಕ ಶಾಸಕರು ಹಂಗಾಮಿ ಸಿಎಂ ಸಿದ್ದರಾಮಯ್ಯ ಮನೆ ಬಾಗಿಲು ತಟ್ಟಿದ್ದಾರೆ.

ಹೇಗಾದರೂ ಸರಿ ಡಿಕೆಶಿಯ ಹೊಸ ಸಂಪುಟ ಸೇರ್ಪಡೆ ಆಗಲು ಸಿದ್ದರಾಮಯ್ಯ ಕಾವೇರಿ ನಿವಾಸಕ್ಕೆ ಅನೇಕ ಶಾಸಕರು ಭೇಟಿ ಮಾಡಿ ಸಚಿವ ಸ್ಥಾನ ಕೊಡಿಸಿ ಅಂತ



ಸಿದ್ದರಾಮಯ್ಯಗೆ ಮನವಿ ಮಾಡಿದ್ದಾರೆ. ಶಾಸಕರಾದ ಜಮೀರ್ ಅಹ್ಮದ್, ರಿಜ್ವಾನ್ ಅರ್ಷದ್, ರಘುಮೂರ್ತಿ, ಗೋವಿಂದಪ್ಪ, ಅಶೋಕ್ ಪಟ್ಟಣ್, ಪುಟ್ಟರಂಗಶೆಟ್ಟಿ, ಎಂಎಲ್‌ಸಿ ಐವಾನ್ ಡಿಸೋಜಾ, ಬಲ್ಕೀಸ್ ಸಿದ್ದು ನಿವಾಸಕ್ಕೆ ಆಗಮಿಸಿ ಚರ್ಚಿಸಿದ್ದಾರೆ.

ಸಿದ್ದರಾಮಯ್ಯ ಭೇಟಿ ಬಳಿಕ ಪ್ರತಿಕ್ರಿಯಿಸಿದ ಎಂಎಲ್‌ಸಿ ಐವಾನ್ ಡಿಸೋಜಾ, ನಾನು ಕ್ರಿಶ್ಚಿಯನ್ ಸಮುದಾಯದಿಂದ ಸಚಿವ ಸ್ಥಾನ ಕೇಳಿದ್ದೇನೆ. ನಾನು ಆಕಾಂಕ್ಷಿ. ನಮ್ಮ ಸಮುದಾಯದ

ಪುಟ 2ಕ್ಕೆ

### ಯತೀಂದ್ರ ಸೈಲೆಂಟ್!

ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ ಅಂತಿದ್ದ ಯತೀಂದ್ರ ಅವರು ಈವರೆಗೂ ಸಿದ್ದರಾಮಯ್ಯ ರಾಜೀನಾಮಗೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇಂದು ಕಾವೇರಿ ನಿವಾಸಕ್ಕೆ ಭೇಟಿ ನೀಡಿದ್ದ ಯತೀಂದ್ರ ಅವರು ಸಂಪೂರ್ಣವಾಗಿ ಮೌನಕ್ಕೆ ಶರಣಾಗಿದ್ದರು. ಹೈಕಮಾಂಡ್ ಮಾತಿನಂತೆ ಸಿದ್ದ ರಾಮಯ್ಯ ರಾಜೀನಾಮೆ ನೀಡಿದ್ದಾರೆ. ಯತೀಂದ್ರಗೆ ಸಚಿವ ಸ್ಥಾನ ಅಥವಾ ಡಿಸಿಎಂ ಸ್ಥಾನ ನೀಡುವ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ ಎನ್ನಲಾಗಿದೆ. ಸಿದ್ದರಾಮಯ್ಯ ಅವರ ನಿರ್ಗಮನದ ಬಳಿಕ, ವಿವಿಧ ಜಾತಿ, ಸಮುದಾಯಗಳು ಹಾಗೂ



ಪುಟ 2ಕ್ಕೆ

### ಅಜ್ಜಯ್ಯನ ಮಠಕ್ಕೆ ಡಿಕೆಶಿ ಭೇಟಿ



**ಬೆಂಗಳೂರು:** ರಾಜ್ಯಪಾಲರ ಭೇಟಿ ಬಳಿಕ ಡಿಕೆ ಶಿವಕುಮಾರ್ ಅವರು, ಶನಿವಾರ ಅಜ್ಜಯ್ಯನ ಮಠಕ್ಕೆ ಭೇಟಿ ನೀಡಿ, ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು.


ಬುಧವಾರ ನೂತನ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ರಾಜ್ಯಪಾಲರ ಭೇಟಿ ಬಳಿಕ ನೇರವಾಗಿ ನಾಗರಬಾವಿಯ ಅಜ್ಜಯ್ಯನ ಶಾಖಾ ಮಠಕ್ಕೆ ಡಿಕೆಶಿ, ಪತ್ನಿ ಉಷಾ ಹಾಗೂ ಡಿಕೆ ಸುರೇಶ್ ಭೇಟಿ ನೀಡಿದ್ದರು. ಈ ವೇಳೆ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದುಕೊಂಡಿದ್ದಾರೆ.

ಈ ವೇಳೆ ಅಜ್ಜಯ್ಯ ಮಠದ ಶ್ರೀಗಳು ಕೆಲವು ಸಲಹೆ ಹಾಗೂ ಎಚ್ಚರಿಕೆ

ಪುಟ 2ಕ್ಕೆ

### ಸಿದ್ದು ವಿರುದ್ಧ ದ್ವೇಷವಿಲ್ಲ: ಪ್ರಮೋದಾದೇವಿ ಒಡೆಯರ್

**ಮೈಸೂರು:** ಸಿದ್ದರಾಮಯ್ಯ ವಿರುದ್ಧ ಯಾವುದೇ ದ್ವೇಷವಿಲ್ಲ. ಅವರು ರಾಜಮನೆತನಕ್ಕೆ ಹತ್ತಿರವೂ ಇಲ್ಲ ಅಥವಾ ದೂರವೂ ಇಲ್ಲ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.



ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಪ್ರಸಕ್ತ ರಾಜಕೀಯ ಬೆಳವಣಿಗೆಗಳನ್ನು ಕುರಿತು ನಾನು ಮಾತನಾಡುವುದಿಲ್ಲ. ಆದರೆ, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಇಳಿದರೆ ಮೈಸೂರು ಅಭಿವೃದ್ಧಿ ಕುಂಠಿತಗೊಳ್ಳಲು ಸಾಧ್ಯವಿಲ್ಲ. ಹಾಗೇನಾದರೂ ಆದರೆ, ನಿರ್ಲಕ್ಷ್ಯ ವಹಿಸಿದಲ್ಲಿ ಜನರು ಒತ್ತಡ ಹಾಕಿ ಕೆಲಸ ಮಾಡಿಸಿಕೊಳ್ಳಬೇಕು ಎಂದು ಹೇಳಿದರು.


ನೂತನ ಮುಖ್ಯಮಂತ್ರಿ ಯಾರೇ ಆದರೂ ಅವರಿಗೆ ಆಡಳಿತ ಹಿಡಿತಕ್ಕೆ ಬರಲು, ಅಭಿವೃದ್ಧಿ ಕಾರ್ಯ ನಡೆಯಲು

ಪುಟ 2ಕ್ಕೆ

### ಅಭಿಮಾನಿಯಿಂದ ಪ್ರಯಾಗ್ ರಾಜ್‌ನಲ್ಲಿ ಪ್ರಾರ್ಥನೆ

**ಬೆಂಗಳೂರು:** ರಾಮನಗರ ಸಮೀಪದ ಹಾರೋಹಳ್ಳಿ ತಾಲೂಕಿನ ಚಿಕ್ಕಸಾದೇನಹಳ್ಳಿ ಗ್ರಾಮದ ಈಶ್ವರಪ್ಪ ಎಂಬ ಅಭಿಮಾನಿ ತಮ್ಮ ನೆಚ್ಚಿನ ನಾಯಕ ಡಿ ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆಂದು ಕಳೆದ ಮೂರು ವರ್ಷಗಳಿಂದ ವಿಶಿಷ್ಟ ಹರಕೆ ಹೊತ್ತಿದ್ದರು.

ಡಿಕೆಶಿ ರಾಜ್ಯದ ಮುಖ್ಯಮಂತ್ರಿಯಾಗುವವರೆಗೂ ನಾನು ತಲೆಗೂದಲು ಹಾಗೂ ಗಡ್ಡವನ್ನು ಕತ್ತರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಈ ಈಶ್ವರಪ್ಪ ಇದೀಗ ಉತ್ತರ ಪ್ರದೇಶದ ಪ್ರಯಾಗ್ ರಾಜ್‌ಗೆ ಹೋಗಿ ಪವಿತ್ರ ತ್ರಿವೇಣಿ ಸಂಗಮದಲ್ಲಿ ಡಿ.ಕೆ ಶಿವಕುಮಾರ್ ಭಾವಚಿತ್ರವನ್ನು ಕೈಯಲ್ಲಿ ಹಿಡಿದು ಸ್ನಾನ ಮಾಡಿದ್ದಾರೆ. ಅವರು ಸಿಎಂ ಆಗಲಿ ಎಂದು ವಿಶೇಷ ಪ್ರಾರ್ಥನೆ ಮತ್ತು ಪೂಜೆ ಸಲ್ಲಿಸಿದ್ದಾರೆ.



ಕಳೆದ ಮೂರು ವರ್ಷಗಳಿಂದ ಗಡ್ಡ ಮತ್ತು ದಟ್ಟವಾದ ತಲೆಗೂದಲು ಬಿಟ್ಟು ತಿರುಗುತ್ತಿದ್ದ ಈಶ್ವರಪ್ಪ ಈಗ ಖುಷಿಯಾಗಿದ್ದಾರೆ. ಡಿಕೆ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ತಕ್ಷಣವೇ ಬೆಂಗಳೂರಿಗೆ ಬಂದು ಅವರನ್ನು ಖುದ್ದಾಗಿ ಭೇಟಿಯಾಗಿ ಅಭಿನಂದನೆ ಸಲ್ಲಿಸಲು ಈಶ್ವರಪ್ಪ ನಿರ್ಧರಿಸಿದ್ದಾರೆ. ಬಳಿಕ ನೇರವಾಗಿ ಮಂತ್ರಾಲಯ ಪುಣ್ಯಕ್ಷೇತ್ರಕ್ಕೆ ತೆರಳಿ ಶ್ರೀಗುರುರಾಯರ ಸನ್ನಿಧಿಯಲ್ಲಿ ತಲೆಗೂದಲು ಹಾಗೂ ಗಡ್ಡವನ್ನು ಒಪ್ಪಿಸಿ ಹರಕೆ ತೀರಿಸುವುದಾಗಿ ತಿಳಿಸಿದ್ದಾರೆ.

### ಸಿಎಲ್‌ಪಿ ಸಭೆಗೂ ಮುನ್ನವೇ ಡಿಕೆಶಿಯಿಂದ ರಾಜ್ಯಪಾಲರ ಭೇಟಿ

**ಬೆಂಗಳೂರು:** ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಿಎಲ್‌ಪಿ ಸಭೆಗೂ ಮುನ್ನ ಶನಿವಾರ ಬೆಳಗ್ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಅಧಿಕೃತ ನಿವಾಸ ಲೋಕ ಭವನದಲ್ಲಿ ಭೇಟಿಯಾಗಿ ಕೆಲಕಾಲ ಚರ್ಚಿಸಿದರು.



ಲೋಕಭವನಕ್ಕೆ ಶಿವಕುಮಾರ್ ಅವರ ಭೇಟಿ ಆಡಳಿತಾರೂಢ ಕಾಂಗ್ರೆಸ್‌ಗೆ ಮಹತ್ವದ ಕ್ಷಣವಾಗಿದೆ. ನಾಯಕತ್ವ ಮತ್ತು ಸಾಂಸ್ಥಿಕ ವಿಷಯಗಳ ಕುರಿತು ಚರ್ಚಿಸಲು ಪಕ್ಷ ಇಂದು ಸಂಜೆ 4 ಗಂಟೆಗೆ ಪ್ರಮುಖ ಸಿಎಲ್‌ಪಿ ಸಭೆಯನ್ನು ಕರೆದಿತ್ತು. ಅದಕ್ಕೂ ಮುನ್ನ ರಾಜ್ಯಪಾಲರನ್ನು ಭೇಟಿ ಮಾಡಿದ ಡಿಕೆಶಿ ಅವರು, ಪ್ರಮಾಣ ವಚನ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ರಾಜ್ಯಪಾಲ ಗೆಹ್ಲೋಟ್ ಅವರು ಸಿದ್ದರಾಮಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಸಚಿವ ಸಂಪುಟವನ್ನು

ಪುಟ 2ಕ್ಕೆ

# ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನ್ಯಾ.ದೇಸಾಯಿ ನೇಮಕ

## ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ನಿರ್ಗಮನಕ್ಕೂ ಮುನ್ನ ಪ್ರಮುಖ ನಿರ್ಧಾರ

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

ಈ ನೇಮಕ ರಾಜ್ಯ ರಾಜಕೀಯದಲ್ಲಿ ಪಕ್ಷಪಾತದ ಆರೋಪಕ್ಕೆ ಕಾರಣವಾಗಿದೆ. ಸಿದ್ದರಾಮಯ್ಯ ರಾಜೀನಾಮೆ ನೀಡುವ ಕೆಲವೇ ದಿನಗಳ ಮೊದಲು ಮೇ 22 ರಂದು ದೇಸಾಯಿ ಅವರನ್ನು ನೇಮಕ ಮಾಡಲು ಸರ್ಕಾರ ನಿರ್ಧರಿಸಿತ್ತು.



ಮುಖ್ಯಮಂತ್ರಿ ಪತ್ನಿ ಪಾರ್ವತಿ ಸಿದ್ದರಾಮಯ್ಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ಪಡೆದ ನಿವೇಶನ ಸಂಬಂಧ, ಭೂ ಮಂಜೂರಾತಿ ಪ್ರಕರಣದ ತನಿಖೆ ನಡೆಸಿದ ಏಕಸದಸ್ಯ ನ್ಯಾಯಾಂಗ ಆಯೋಗದ ನೇತೃತ್ವವನ್ನು ನ್ಯಾಯಮೂರ್ತಿ ದೇಸಾಯಿ ವಹಿಸಿದ್ದರು. ಮುಡಾದಿಂದ ಪರ್ಯಾಯ ನಿವೇಶನಗಳ ಹಂಚಿಕೆ ಕಾನೂನುಬಾಹಿರವಲ್ಲ ಎಂದು ಆಯೋಗವು ಸಿದ್ದರಾಮಯ್ಯ ಮತ್ತು ಕುಟುಂಬಕ್ಕೆ ಕ್ಲೀನ್ ಚಿಟ್ ನೀಡಿತ್ತು. ಈ ವರದಿಯನ್ನು ಸೆಪ್ಟೆಂಬರ್ 2025ರಲ್ಲಿ ರಾಜ್ಯ ಸಚಿವ ಸಂಪುಟ ಅಂಗೀಕರಿಸಿತ್ತು.

ಸಿದ್ದರಾಮಯ್ಯ ಅವರು ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರಿಗೆ ಕೃತಜ್ಞತೆ ಸಲ್ಲಿಸಲು ಅವರನ್ನು ರಾಜ್ಯ ಮಾನವಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ ಎಂದು ರಾಜಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿದೆ.

ಮುಡಾ ಪ್ರಕರಣ ಸಿದ್ದರಾಮಯ್ಯ ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಿತ್ತು. ನಿಯಮಗಳನ್ನು ಉಲ್ಲಂಘಿಸಿ ಪಾರ್ವತಿ ಸಿದ್ದರಾಮಯ್ಯ ಅವರು ತಮ್ಮ ಭೂಮಿಗೆ ಬದಲಾಗಿ ಮೈಸೂರಿನ ಪ್ರಮುಖ ಬಡಾವಣೆಯಲ್ಲಿ 14 ಪರಿಹಾರ ನಿವೇಶನಗಳನ್ನು ಪಡೆದಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿದವು.

ಪ್ರಕರಣದಲ್ಲಿ ತಮಗೆ ಅನುಕೂಲಕರ ವರದಿಯನ್ನು ನೀಡಿದ ನ್ಯಾಯಾಧೀಶರನ್ನು ರಾಜ್ಯದ ಮಾನವ ಹಕ್ಕುಗಳ ಸಂಸ್ಥೆಯ ಮುಖ್ಯಸ್ಥರನ್ನಾಗಿ ನೇಮಿಸಿರುವುದು, ಅದು ಕೂಡ ಮುಖ್ಯಮಂತ್ರಿ ಸ್ವತಃ ನಿರ್ಗಮಿಸುವ ಮುನ್ನಾದಿನ ತೆಗೆದುಕೊಂಡಿರುವ ಈ ನಿರ್ಧಾರ ವಿವಾದಕ್ಕೆ ಕಾರಣವಾಗಿದೆ.

# ಡಿಸಿಎಂ ಹುದ್ದೆ ಸೃಷ್ಟಿ ಬೇಡ: ಡಿಕೆಶಿ, ಜಾರಕಿಹೊಳಿ ಪ್ರಸ್ತಾಪ

**ಬೆಂಗಳೂರು:** ಡಿಸಿಎಂಗಳ ಹುದ್ದೆ ಸೃಷ್ಟಿ ಬೇಡವೇ ಬೇಡ ಎಂದು ಕಾಂಗ್ರೆಸ್ ಹೈಕಮಾಂಡ್ ಮುಂದೆ ಡಿ.ಕೆ.ಶಿವಕುಮಾರ್ ಹಾಗೂ ಸತೀಶ್ ಜಾರಕಿಹೊಳಿ ಪ್ರಸ್ತಾಪ ಇಟ್ಟಿದ್ದಾರೆ ಎನ್ನಲಾಗಿದೆ.

ನೂತನ ಕ್ಯಾಬಿನೆಟ್‌ಗೆ ಕಸರತ್ತು ನಡೆಯುತ್ತಿರುವ ಹೊತ್ತಿನಲ್ಲೇ ಈ ಪ್ರಸ್ತಾಪ ನಡೆದಿದೆ. ದಲಿತ, ಲಿಂಗಾಯತ, ಅಲ್ಪಸಂಖ್ಯಾತ, ಒಬಿಸಿ ಸಮುದಾಯಗಳಿಗೆ ಮಣೆ ಹಾಕಬೇಕು. ಯಾರಿಗಾದರೂ ಇಬ್ಬರಿಗೆ ಕೊಟ್ಟರೂ ಅಸಮಾಧಾನ ಸಾಧ್ಯತೆಯಿದೆ. ನಾಲ್ಕು ಡಿಸಿಎಂ ಸೃಷ್ಟಿ ಮಾಡಿದರೆ ಹಾಸ್ಯಾಸ್ಪದ ಎಂದು ಹೈಕಮಾಂಡ್ ಬಳಿ ಪ್ರಸ್ತಾಪವಿಟ್ಟಿದ್ದಾರೆ.

ಈ ಕುರಿತು ರಾಹುಲ್ ಗಾಂಧಿ ಜೊತೆ ಚರ್ಚಿಸಿ ತೀರ್ಮಾನ ಮಾಡೋಣ ಎಂದು ಕೆ.ಸಿ.ವೇಣುಗೋಪಾಲ್ ಸ್ಪಷ್ಟನೆ ನೀಡಿದ್ದಾರೆ. ಸೋಮವಾರ ಡಿಸಿಎಂಗಳ ಹುದ್ದೆ ಸೃಷ್ಟಿ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಡಿ.ಕೆ.ಶಿವಕುಮಾರ್ ನೇತೃತ್ವದ ಹೊಸ ಸರ್ಕಾರದ ರೂಪುರೇಷೆಗಳ ಬಗ್ಗೆ ಪ್ರಮುಖ ನಿರ್ದೇಶನಗಳನ್ನು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೊಸ ಸಚಿವ ಸಂಪುಟದಲ್ಲಿ ದಲಿತರು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬುದು ರಾಹುಲ್ ಗಾಂಧಿ ಅವರ ಆಶಯವಾಗಿದೆ. ಸಾಮಾಜಿಕ ನ್ಯಾಯದ ತಮ್ಮ ರಾಜಕೀಯ ಅಜೆಂಡಾದ ಭಾಗವಾಗಿ ಅವರು ಈ ವಿಷಯಕ್ಕೆ

ಪುಟ 2ಕ್ಕೆ

ವರ್ತಮಾನ

ಭಾನುವಾರ
ಮೇ 31, 2026

# ಕೆ.ರಾಜು ವಿರುದ್ಧ ಮಾತನಾಡುವ ನೈತಿಕತೆ ಜೆಡಿಎಸ್‌ಗಿಲ್ಲ

## ಜಿಪಂ ಚುನಾವಣೆಯಲ್ಲಿ ಕೆ.ರಾಜು ಅವರನ್ನು ಸೋಲಿಸುವಂತೆ ಹೇಳಿದ್ದರು ಕುಮಾರಸ್ವಾಮಿ: ಪಿ.ಅಶ್ವಥ್ ಆರೋಪ

ರಾಮನಗರ: ಈ ಹಿಂದೆ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಕೆ.ರಾಜು ಅವರು ಸೋತಿದ್ದು ನಿಜ. ಆದರೆ ಅವರನ್ನು ಸೋಲಿಸುವಂತೆ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರ್ಯಕರ್ತರಿಗೆ ಹೇಳಿದ್ದರು ಎಂದು ಕಾಂಗ್ರೆಸ್ ಮುಖಂಡ ಹಾಗೂ ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಪಿ.ಅಶ್ವಥ್ ದೂರಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೆ.ರಾಜು ಅವರನ್ನು ಸೋಲಿಸುವಂತೆ ಸ್ವತಃ ಕುಮಾರಸ್ವಾಮಿರವರೇ ಎಂದು ಹೇಳಿರುವುದಕ್ಕೆ ಅನೇಕ ಜೆಡಿಎಸ್ ಮುಖಂಡರೇ ಸಾಕ್ಷಿಯಿದ್ದಾರೆ. ವಿವಿಧ ಚುನಾವಣೆಗಳಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಚನ್ನೇನಹಳ್ಳಿ ನಾಗಣ್ಣ, ಅಕ್ಕೂರು ಸುಮಿತ್ರಮ್ಮ, ಅಂಜನಾಪುರ ಭದ್ರಯ್ಯ, ಹುಣಸನಹಳ್ಳಿ ಲಕ್ಷ್ಮೀಕಾಂತ್, ರಾಮನಗರದ ಶೇಷಾದ್ರಿ, ಬಾಲಣ್ಣನವರ ತಮ್ಮ ಅಶೋಕ್ ತಮ್ಮಾಜಿ ಇವರನ್ನು ಸಹ ಸೋಲಿಸಿ ಎಂದು ಎಚ್.ಡಿ.ಕೆ ಹೇಳಿದ್ದರು. ಇದಕ್ಕೆಲ್ಲ ಅಂದು ಜೆಡಿಎಸ್‌ನಲ್ಲಿದ್ದ ನಾವೇ ಸಾಕ್ಷಿ ಇದ್ದೇವೆ. ಯಾವ ದೇವಾಲಯದಲ್ಲಿ ಬೇಕಾದರೂ ಪ್ರಮಾಣ ಮಾಡಲು ನಾವು ಸಿದ್ದ ಎಂದರು. ಇಂದು ಕೆ.ರಾಜು ಅವರ ವಿರುದ್ದ ಮಾತನಾಡುವವರು ತಮ್ಮ ಆತ್ಮಸಾಕ್ಷಿ ಇಟ್ಟು ಮಾತನಾಡಲಿ ಎಂದರು. ಸುದ್ದಿಗೋಷ್ಠಿಯಲ್ಲಿ ರಾ.ಚ.ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಶೇಖರ್, ತಾಪಂ ಮಾಜಿ ಅಧ್ಯಕ್ಷ ಭದ್ರಯ್ಯ, ಕೈಲಾಂಚ ಗ್ರಾಪಂ ಮಾಜಿ ಅಧ್ಯಕ್ಷ ಎಸ್.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಜಗದೀಶ್, ಮುಖಂಡರಾದ ಕೆಂಪೇಗೌಡನದೊಡ್ಡಿ ಮಂಚೇಗೌಡ, ದೇವರದೊಡ್ಡಿ ಚಂದ್ರಗಿರಿ, ಆಲೇಮರದದೊಡ್ಡಿ ಕರಿಯಪ್ಪ ಮುಂತಾದವರಿದ್ದರು.



### ಆಪರೇಷನ್ ಕಮಲಕ್ಕೆ ಒಳಗಾಗಲಿಲ್ಲ

ರಾಜಣ್ಣನವರು ಶಾಸಕರಾಗಿದ್ದಾಗ ಸಹಜವಾಗಿ ಸರ್ಕಾರದಿಂದ ಪಡೆಯಬೇಕಿದ್ದ ನಿವೇಶನ ಕೂಡ ಪಡೆದವರಲ್ಲ. ಬಿಜೆಪಿಯಿಂದ ಆಪರೇಷನ್ ಕಮಲ ಮಾಡಿದಾಗ 30 ಕೋಟಿ ಹಣ, ಮಂತ್ರಿ ಸ್ಥಾನದ ಆಮಿಷ ನೀಡಿದರೂ ಒಪ್ಪದೆ ಪಕ್ಷ ನಿಷ್ಠೆ ತೋರಿದ್ದಾರೆ. ಅಂತವರ ಬಗ್ಗೆ ಜಡಿಎಸ್ ಮುಖಂಡರು ಮಾತನಾಡಲು ಯಾವುದೇ ನೈತಿಕತೆ ಇಲ್ಲ ಎಂದರು.

### ಬಲವಂತ ಮಾಡಿ ಕೆ.ರಾಜು ಅವರಿಗೆ ಟಿಕೆಟ್ ಕೊಟ್ಟರು

ಕೆ.ರಾಜು ಅವರು ಯಾರದೋ ಮರ್ಜಿಯಲ್ಲಿ ಬೆಳೆದವರಲ್ಲ. ಅವರು ರಾಜಕರಣ ಆರಂಭಿಸಿದಾಗ ಈ ಟೀಕಿಸುತ್ತಿರುವವರ ಪೈಕಿ ಅನೇಕರು ಇನ್ನು ಹುಟ್ಟಿರಲೇ ಇಲ್ಲ. ಜಿಪಂ ಚುನಾವಣೆಯಲ್ಲಿ ಕೆ.ರಾಜು ಸೋತಿದ್ದು ನಿಜ. ವಿಧಾನಸಭೆಗೆ ನಡೆದ ಉಪಚುನಾವಣೆ ವೇಳೆ ಕೇಟ್ ಕೇಳದಿದ್ದರೂ ಜನ ಮತ್ತು ಕುಮಾರಸ್ವಾಮಿಯವರೇ ಒತ್ತಾಯ ಮಾಡಿ ಟಿಕೇಟ್ ನೀಡಿದ್ದರು. ಮತದಾರರು ಕೆ.ರಾಜು ಅವರನ್ನು ಜೆಡಿಎಸ್‌ನಿಂದ ಶಾಸಕರಾಗಿ ಆಯ್ಕೆ ಮಾಡಿದರು. ಪಕ್ಷ ಕಟ್ಟಿದ್ದರಿಂದಲೇ ಕೆ.ರಾಜು ಆಯ್ಕೆಯಾದರು. ಕುಮಾರಸ್ವಾಮಿ ಅವರೇ ಕೆ.ರಾಜು ಅವರನ್ನು ಶಾಸಕರನ್ನಾಗಿ ಮಾಡಿದ್ದು ಎಂಬಂತೆ ಬಿಂಬಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸದಿರು.

### ಉಪ್ಪಿನ ಮೇಲೆ ನಿಂತು ಪ್ರಮಾಣ ಮಾಡಲು ಸಿದ್ಧ: ಮಹೇಶ್

ತಾಪಂ ಚುನಾವಣೆಯಲ್ಲಿ ಜೆಡಿಎಸ್ ನಿಂದ ಸ್ಪರ್ಧಿಸಿದ್ದ ಲಕ್ಷ್ಮೀಕಾಂತ ಅವರನ್ನು ಸೋಲಿಸಲು ಪಕ್ಷೇತರ ಅಭ್ಯರ್ಥಿಗೆ 10 ಲಕ್ಷ ರೂ ಕೊಟ್ಟಿದ್ದರು ಕುಮಾರಸ್ವಾಮಿ ಎಂದು ಅವರು ಆರೋಪಿಸಿದರು. ವಿಧಾನಸಭಾ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಬೇಕಾದ್ದು ಮತದಾರರು. ಆದರೆ ಅವರು ಆಯ್ಕೆಯಾಗಲಿಲ್ಲ. ಫಲಿತಾಂಸ ಬಂದ ನಂತರ ಮಾತನಾಡಿದ, ನಿಖಿಲ್ ಅವರು ಜೆಡಿಸ್ ಪಕ್ಷದ ಪ್ರಮುಖರ ವಿರುದ್ಧ ಅಪಪ್ರಚಾರ ಮಾಡಿದರು. ಕಾಂಗ್ರೆಸ್ ಪಕ್ಷಕ್ಕೆ ಬುಕ್ ಆಗಿದ್ದೇವೆ ಎಂದು ದೂರಿದರು. ಆದರೆ ತಾವೆಲ್ಲ ಪಕ್ಷಕ್ಕೆ ನಿಷ್ಠೆಯಿಂದ ಇದ್ದೆವು. ನಿಖಿಲ್ ಅವರ ಗೆಲುವಿಗೆ ಶ್ರಮಿಸಿದ್ದೆವು. ತಮ್ಮ ಶ್ರಮ ಸತ್ಯ ಎಂಬುದಕ್ಕೆ ನಗರದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮುಂದೆ ಉಪ್ಪಿನ ಮೇಲೆ ನಿಂತು ಪ್ರಮಾಣ ಮಾಡುತ್ತೇವೆ. ಆದರೆ ನಿಖಿಲ್ ಅವರ ಹೇಳಿಕೆಯಿಂದ ಬೇಸೆತ್ತು ತಾವೆಲ್ಲ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದಾಗಿ ತಿಳಿಸಿದರು.

### ಎಚ್.ಡಿ.ಕೆ ಸೋತು ಬಂದಾಗ ಆಧರಿಸಿದ್ದು ಯಾರು?

1999ರಲ್ಲಿ ಸಾತನೂರು ವಿಧಾನಸಭೆ ಚುನಾವಣೆಯಲ್ಲಿ ಡಿ.ಕೆ. ಶಿವಕುಮಾರ್ ಎದುರು ಹೀನಾಯವಾಗಿ ಕುಮಾರಸ್ವಾಮಿ ಅವರು ಸೋತಾಗ ರಾಮನಗರಕ್ಕೆ ಕುಮಾರಸ್ವಾಮಿ ಅವರನ್ನು ಕರೆದುಕೊಂಡು ಬಂದು ಅವರ ನಾಯಕತ್ವದಲ್ಲಿ ಚುನಾವಣೆ ನಡೆಸಬೇಕೆಂದು ನಿರ್ಧಾರ ತೆಗೆದುಕೊಂಡವರಲ್ಲಿ ಕೆ.ರಾಜು ಪ್ರಮುಖರು. 1999 ರಿಂದ 2004 ರವರೆಗಿನ ಗ್ರಾಪಂ, ತಾಪಂ, ಜಿ.ಪಂ. ಸಹಕಾರ ಸಂಘಗಳ ಚುನಾವಣೆಗಳಿಗೆ ಕೆ.ರಾಜು ತಮ್ಮ ಸ್ವಂತ ಉಪಯೋಗಿಸಿದ್ದಾರೆ. ಸಾಲಗಾರರಾಗಿದ್ದಾರೆ. ಅವರ ಪಕ್ಷನಿಷ್ಠೆ, ಸ್ವಾಮಿ ನಿಷ್ಠೇಯಿಂದ ಬೇರೆಯವರಿಗೆ ಸುಳ್ಳು ಮೋಸ ಮಾಡದೆ ನೇರವಾದಿಯಾಗಿ ನಡೆದವರು ರಾಜಣ್ಣ ತಮ್ಮ ರಾಜಕೀಯದಲ್ಲಿ ಹಲವಾರು ಜನರಿಗೆ ಕೆಲಸ ಕೊಡಿಸಿ ಯಾರಿಂದಲೂ ಬಿಡಿಗಾಸಿಗೆ ಆಸೆ ಬಿದ್ದವರಲ್ಲ. ಯಾವ ಅಧಿಕಾರಿ ಮುಂದೆಯೂ ಕೈಚಾಚಿ ನಿಂತವರಲ್ಲ ಎಂದರು.

### ಒಡವೆ ಅಡಮಾನ ಇಟ್ಟು ಪಕ್ಷ ಕಟ್ಟಿದ್ದರು

ತಮ್ಮ ಮನೆಯ ಒಡವೆಯನ್ನು ಅಡಮಾನ ಇಟ್ಟು, ಅನ್ಯರ ಬಳಿ ಸಾಲ ಪಡೆದು, ಬಡ್ಡಿಕಟ್ಟಿ, ಜೆಡಿಎಸ್ ಪಕ್ಷವನ್ನು ಕಟ್ಟಿದ್ದ ಕೆ.ರಾಜು ಅವರು ಇಂದು ಕಾಂಗ್ರೆಸ್ ಸೇರಿದ್ದಾರೆ. ಇದಕ್ಕೆ ಕಾರಣಗಳು ಹಲವಾರಿವೆ. ಇವೆಲ್ಲವನ್ನು ಅರಿಯದ ಇಂದಿನ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಕೆ.ರಾಜು ಅವರನ್ನು ಟೀಕಿಸುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದೆ ತಾವು ಸಹ ಜೆಡಿಎಸ್ ಪಕ್ಷದಲ್ಲಿದ್ದ ವೇಳೆ ಕೆ.ರಾಜು ಅವರು ಪಕ್ಷ ಕಟ್ಟಿದ್ದನ್ನು ಕಣ್ಣಾರೆ ಕಂಡಿದ್ದೇವೆ. ಸೈಟ, ಭೂಮಿ ಮಾರಿ ಪಕ್ಷಕಟ್ಟಿದ್ದಾರೆ ವಿನಃ ಶಾಸಕರಾಗಿ ಎಂದೂ ಅವರು ಶಾಸಕರಾದ ನಂತವೂ ಎಂದೂ ಹಣದಾಸೆ ಪಡಲಿಲ್ಲ. ಅಧಿಕಾರದ ದುರುಪಯೋಗ ಮಾಡಿಕೊಳ್ಳಲಿಲ್ಲ. ಇಂತಹ ವ್ಯಕ್ತಿತ್ವವಿದ್ದರೂ ಇಂದು ಜೆಡಿಎಸ್‌ನ ಕೆಲವರು ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ ಎಂದರು.

---

ಮೊದಲ ಪುಟದಿಂದ

## ಜೂ.3ಕ್ಕೆ ಡಿಕೆಶಿ ಪಟ್ಟಾಭಿಷೇಕ

ಆಗಿರುವುದಿಂದ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಬೇಡ ಎಂಬ ತೀರ್ಮಾನ ಮಾಡಲಾಗಿದೆ. ಹೀಗಾಗಿ ಯಾರೂ ಸಹ ಬೆಂಗಳೂರಿಗೆ ಬರಬಾರದು ಎಂದು ಮನವಿ ಮಾಡಿದರು.

ದೊಡ್ಡ ಪ್ರಮಾಣದ ಕಾರ್ಯಕ್ರಮ ನಡೆಸಲು ಜನರನ್ನು ಕರೆತರಲು ರಾಜ್ಯದ ವಿವಿಧ ಭಾಗಗಳಿಂದ ಸುಮಾರು 10,000ರಿಂದ 15,000 ಬಸ್‌ಗಳನ್ನು ಕಾಯ್ದಿರಿಸುವ ಬಗ್ಗೆ ಚರ್ಚೆಗಳು ನಡೆದಿದ್ದವು. ಆದರೆ ಇಂಧನ ಬಿಕ್ಕಟ್ಟು ಮತ್ತು ಸಂಚಾರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ರದ್ದುಗೊಳಿಸಲಾಯಿತು. ಹೀಗಾಗಿ ಕಾರ್ಯಕ್ರಮವನ್ನು ಸರಳ ರೀತಿಯಲ್ಲಿ ನಡೆಸಬೇಕೆಂದು ಪಕ್ಷ ನಿರ್ದೇಶನ ನೀಡಿದೆ ಎಂದು ಚಂದ್ರಶೇಖರ್ ಮಾಹಿತಿ ನೀಡಿದರು.

ನೂತನ ಮುಖ್ಯಮಂತ್ರಿ ಜೊತೆ 12ರಿಂದ 14 ಸಚಿವರು ಸಂಪುಟಕ್ಕೆ ಸೇರ್ಪಡೆಯಾಗುವ ಸಾಧ್ಯತೆಯಿದೆ. ಆದರೆ ಸಂಪುಟಕ್ಕೆ ಸೇರ್ಪಡೆಯಾಗುವವರು ಯಾರು ಎಂಬುದು ಈವರೆಗೂ ಖಚಿತವಾಗಿಲ್ಲ. ಪ್ರದೇಶವಾರು, ಜಾತಿ, ಸೇವಾ ಹಿರಿತನ, ಪಕ್ಷಕ್ಕೆ ಸಲ್ಲಿಸಿದ ಸೇವೆ ಹಾಗೂ ಮುಂಬರುವ 2028ರ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಸಮತೋಲನದ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬೆನ್ನಲ್ಲಿಯೇ ನೂತನ ಮುಖ್ಯಮಂತ್ರಿ ಆಯ್ಕೆ ಮತ್ತು ಪ್ರಮಾಣವಚನ ಸ್ವೀಕಾರಕ್ಕೆ ಸಿದ್ಧತೆಗಳು ಆರಂಭವಾಗಿವೆ.

## ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಪ್ರಸ್ತಾಪವಿಲ್ಲ: ಕೇಂದ್ರ ಸಚಿವ

ಬದಲಾಗುತ್ತವೆ. ರಾಜ್ಯಗಳು ತಮ್ಮದೇ ಆದ ಸಂದರ್ಭಗಳನ್ನು ಆಧರಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ ಎಂದು ಮೇಘವಾಲ್ ಹೇಳಿದರು. ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡುವ ಮತ್ತು ದೇಶಾದ್ಯಂತ ಗೋಹತ್ಯೆಯನ್ನು ನಿಷೇಧಿಸುವ ಬೇಡಿಕೆಗಳ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲು ಮತ್ತು ದೇಶಾದ್ಯಂತ ಗೋಹತ್ಯೆ ನಿಷೇಧಕ್ಕೆ ಒತ್ತಾಯಿಸಿ ಹಲವಾರು ಸಂಸ್ಥೆಗಳು ಸಂಸದರು ಮತ್ತು ಸರ್ಕಾರಕ್ಕೆ ಜ್ಞಾಪಕ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ ಎಂದರು.

## ಯತೀಂದ್ರ ಸೈಲೆಂಟ್!

ಪಕ್ಷದ ವಿವಿಧ ಬಣಗಳಿಗೆ ಸಮತೋಲನ ಕಲ್ಪಿಸುವ ಉದ್ದೇಶದಿಂದ ಕಾಂಗ್ರೆಸ್ ಹೊಸ ಸಚಿವ ಸಂಪು ಟವನ್ನು ರಚಿಸುವ ಸಾಧ್ಯತೆ ಇದೆ. ಈ ನಡುವೆ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಹೊಸ ಸರ್ಕಾರದಲ್ಲಿ ಮಹತ್ವದ ಖಾತೆ ಸಿಗುವ ಸಾಧ್ಯತೆ ಇದೆ ಎಂದು ಮೂಲಗಳು ಸೂಚಿಸಿವೆ.

## ಸಿದ್ದು ವಿರುದ್ಧ ದ್ವೇಷವಿಲ್ಲ: ಪ್ರಮೋದಾದೇವಿ ಒಡೆಯರ್

ಮೂರ್‍ನಾಲ್ಕು ತಿಂಗಳಾದರೂ ಸಮಯಾವಕಾಶ ಬೇಕು. ಮೈಸೂರಿಗೆ ಈಗ ಮಂಜೂರಾದ ಯೋಜನೆಗಳನ್ನು ಅವರು ಮುಂದುವರಿಸಬೇಕು ಎಂದು ಒತ್ತಾಯಿಸಿದರು.

## ಅಜ್ಜಯ್ಯನ ಮಠಕ್ಕೆ ಡಿಕೆಶಿ ಭೇಟಿ

ನೀಡಿದ್ದಾರೆ. ದೊಡ್ಡ ಮಟ್ಟದ ಸಂಭ್ರಮಾಚರಣೆ ಬೇಡ. ಯೋಚನೆ ಮಾಡಿ ತೀರ್ಮಾನಿಸಿ. ಸಮಯ, ಸಂದರ್ಭದ ತೀರ್ಮಾನ ನಿಮ್ಮ ಕೈಯಲ್ಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

## ಕೈ ಶಾಸಕಾಂಗ ಪಕ್ಷದ ನಾಯಕರಾಗಿ ಡಿಕೆಶಿ ಆಯ್ಕೆ

ಘೋಷಣೆಗೆ ಪರಮೇಶ್ವರ್ ಅನುಮೋದನೆ ನೀಡಿದರು. ಐದು ನಿಮಿಷದಲ್ಲಿ ಆಯ್ಕೆ ಪ್ರಕ್ರಿಯೆ ಮುಗಿಯಿತು.

ಸಿಎಲ್‌ಪಿ ಸಭೆಗೆ 10 ನಿಮಿಷ ಬ್ರೇಕ್ ತೆಗೆದುಕೊಳ್ಳಲಾಯಿತು. ಸಿಎಂ ಕಚೇರಿಗೆ ಕೆ.ಸಿ.ವೇಣುಗೋಪಾಲ್ ಆಗಮಿಸಿದರು. ಡಿಕೆಶಿ ಬಿಟ್ಟು ಸಿಎಂ ಕಚೇರಿಯಲ್ಲಿ ಸಿದ್ದರಾಮಯ್ಯ, ವೇಣುಗೋಪಾಲ್, ಸುರ್ಜೇವಾಲಾ ಪ್ರತ್ಯೇಕವಾಗಿ ಸಭೆ ನಡೆಸಿದರು. ಕೆ.ಸಿ.ವೇಣುಗೋಪಾಲ್ ಅವರು ರಾಹುಲ್ ಗಾಂಧಿಗೆ ಕರೆ ಮಾಡಿ, ಸಿದ್ದರಾಮಯ್ಯ ರಾಜೀನಾಮೆಯನ್ನು ಅಧಿಕೃತವಾಗಿ ತಿಳಿಸಿದರು. ಎಐಸಿಸಿ ಆದೇಶದ ಮೇರೆಗೆ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪೂರ್ಣಗೊಂಡಿತು. ಬುಧವಾರ ಡಿಕೆಶಿ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

## ಸಚಿವ ಸ್ಥಾನಕ್ಕಾಗಿ ಶಾಸಕರ ದುಂಬಾಲು

ಜಾರ್ಜ್ ಅವರಿಗೆ ಡಿಸಿಎಂ ಸ್ಥಾನ ಕೊಡಬೇಕು ಎಂದರು. ಇನ್ನು ಚಳ್ಳಕೆರೆ ಶಾಸಕ ರಘುಮೂರ್ತಿ ನನಗೂ ಸಚಿವ ಸ್ಥಾನ ಕೊಡಿ ಅಂತ ಕೇಳಿದ್ದೇನೆ ಎಂದರು. ಹೊಸದುರ್ಗ ಶಾಸಕ ಗೋವಿಂದಪ್ಪ ಸಹ ಆಕಾಂಕ್ಷಿ ಆಗಿದ್ದಾರೆ.

ಮೊದಲ ಪುಟದಿಂದ

## ಡಿಸಿಎಂ ಹುದ್ದೆ ಸೃಷ್ಟಿ ಬೇಡ: ಡಿಕೆಶಿ, ಜಾರಕಿಹೊಳಿ ಪ್ರಸ್ತಾಪ

ಒತ್ತು ನೀಡುತ್ತಿದ್ದಾರೆ ಎಂದು ಹೇಳಲಾಗಿದೆ.

ಯುವ ನಾಯಕರಿಗೂ ಸಚಿವ ಸಂಪುಟದಲ್ಲಿ ಅವಕಾಶ ನೀಡುವ ಬಗ್ಗೆ ರಾಹುಲ್ ಗಾಂಧಿ ಆಸಕ್ತಿ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. 2028ರ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಹೊಸ ಬದಲಾವಣೆಯ ಸಂದೇಶ ನೀಡುವ ಮತ್ತು ಯುವ ಮತದಾರರನ್ನು ಸೆಳೆಯುವ ಉದ್ದೇಶದಿಂದ ಈ ಕ್ರಮ ಮಹತ್ವದ್ದಾಗಿದೆ ಎಂದು ವಿಶ್ಲೇಷಿಸಲಾಗಿದೆ.

## ಸಿಎಲ್‌ಪಿ ಸಭೆಗೂ ಮುನ್ನವೇ ಡಿಕೆಶಿ ರಾಜ್ಯಪಾಲರ ಭೇಟಿ

ವಿಸರ್ಜಿಸಿದ ಕೆಲವು ದಿನಗಳ ನಂತರ ಈ ಸಭೆ ನಡೆದಿದೆ. ಬೆಂಗಳೂರಿನಲ್ಲಿ ಸಂಜೆ 4 ಗಂಟೆಗೆ ಸಿಎಲ್‌ಪಿ ಸಭೆ ನಡೆಯಲಿದೆ. ನಮ್ಮ ಇಬ್ಬರು ವೀಕ್ಷಕರು ಆಗಮಿಸುತ್ತಾರೆ. ಅವರ ಸಮ್ಮುಖದಲ್ಲಿ ನಾವು ಸಿಎಲ್‌ಪಿ ಸಭೆ ನಡೆಸುತ್ತೇವೆ ಹೈಕಮಾಂಡ್‌ನೊಂದಿಗೆ ಸಮಾಲೋಚಿಸಿದ ನಂತರ ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಶಿವಕುಮಾರ್ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

## ಸಿಂದೂರ2'ಕ್ಕೆ ಸಿದ್ಧ

ಸೇನೆಗಳಲ್ಲಿ ನಮ್ಮ ಸಿನರ್ಜಿಯನ್ನು ಹೆಚ್ಚಿಸುವತ್ತ ಗಮನಹರಿಸುತ್ತಿದ್ದೇವೆ. ಮುಂದಿನ ಯುದ್ಧಕ್ಕೆ ನಮ್ಮನ್ನು ಸಜ್ಜುಗೊಳಿಸಿಕೊಳ್ಳುತ್ತಿದ್ದೇವೆ ಎಂದರು. ಭವಿಷ್ಯದ ಸಂಘರ್ಷಗಳು ಬಾಹ್ಯಾಕಾಶ, ಸೈಬರ್ ಮತ್ತು ಅರಿವಿನ ಯುದ್ಧದಂತಹ ಉದಯೋನ್ಮುಖ ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾಗುತ್ತವೆ ಎಂದು ಅವರು ಹೇಳಿದರು. ಯುದ್ಧಭೂಮಿ ಎಷ್ಟು ಪಾರದರ್ಶಕ ಎಂದರೆ ಪ್ರತಿಯೊಂದು ಚಲನವಲನವೂ ಇನ್ನೊಂದು ಬದಿಗೆ ತಿಳಿದಿದೆ. ಆದ್ದರಿಂದ, ನಮ್ಮ ನಿಯೋಜನೆ, ಉದ್ಯೋಗ ಮತ್ತು ಗಡಿ ಪ್ರದೇಶಗಳಲ್ಲಿನ ನಮ್ಮ ಪಡೆಗಳನ್ನು ಹಾಗೂ ನಾಗರಿಕರನ್ನು ರಕ್ಷಿಸಲು ಅಗತ್ಯವಿರುವ ರಕ್ಷಣೆ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಎಂದು ಹೇಳಿದರು

## ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ



ಚಾಮರಾಜನಗರ, ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ್ ಒತ್ತಾಯಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಆಯ್ಕೆಯಾಗಿರುವ ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅವರು, ಬೆಂಕಿ ಮಹಾದೇವಪ್ಪ, ವಿ.ಸೋಮಣ್ಣ, ಮಲ್ಲಿಕಾರ್ಜುನಪ್ಪ ಅಂತಹ ಘಟಾನುಘಟಿ ನಾಯಕರನ್ನು ಸೋಲಿಸಿ ಶಾಸಕರಾಗಿದ್ದರು. ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದು, ಅನುಭವಿ ಹಾಗೂ ಜನಪರ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿ ಸಚಿವ ಸ್ಥಾನವನ್ನು ನೀಡಬೇಕು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸ್ಥಳೀಯ ಜನರಿಗೆ ಹಾಗೂ ಅಧಿಕಾರಿಗಳಿಗೆ ಕೈಗೆಟುಕುವ ಶಾಸಕರಾಗಿದ್ದು, ಸಚಿವರಾದರೂ ಸಾರ್ವಜನಿಕರಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಅನುಕೂಲವಾಗಲಿದೆ. ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದ ವರೆಗೂ ಅನುಭವ ಹೊಂದಿದ್ದಾರೆ. ಸಹಕಾರ ಕ್ಷೇತ್ರದಲ್ಲೂ ಅಪಾರ ಅನುಭವವನ್ನು ಹೊಂದಿದ್ದಾರೆ. ಅವರಿಗೆ ಸಚಿವ ಸ್ಥಾನವನ್ನು ನೀಡಿದರೆ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಬಲ ತುಂಬಿದಂತಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷದ ಹೈಕಮಾಂಡ್ ಪುಟ್ಟರಂಗಶೆಟ್ಟಿ ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಮರಿಯಾಲದಹುಂಡಿ ಕುಮಾರ್, ಮಲ್ಲಿಕಾರ್ಜುನ ಲಿಂಗನಪುರ, ಹೆಗ್ಗೋಠಾರ ರಮೇಶ್, ರಾಜು ಅಮಚವಾಡಿ, ರಾಜೇಶ್ ಮೂಡಹಳ್ಳಿ, ಕುಮಾರ್ ಮಾದಾಪುರ, ಮಂಜುಳಾ ಹಾಜರಿದ್ದರು.

### ಸಾಧನೆಯ ಶಿಖರಗಳು ಕೃತಿ ಸೋಮವಾರ ಬಿಡುಗಡೆ

ಮೈಸೂರು: ಇಲ್ಲಿನ ಭಾರತೀ ಪ್ರಕಾಶನದ ಆಶ್ರಯದಲ್ಲಿ ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ಅವರ ಸಾಧನೆಯ ಶಿಖರಗಳು ಕೃತಿ ಜೂನ್ 1 ರಂದು ಸೋಮವಾರ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಬೆಳಗ್ಗೆ 10. 30 ಗಂಟೆಗೆ ಬಿಡುಗಡೆಯಾಗಲಿದೆ.

**▸▸ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಆಯೋಜನೆ**

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪುಸ್ತಕ ಬಿಡುಗಡೆ ಮಾಡುವರು. ವಿಧಾನಪರಿಷತ್ ಸದಸ್ಯ, ಹಿರಿಯ ಪತ್ರಕರ್ತ ಕೆ. ಶಿವಕುಮಾರ್, ? ಜನಮಿತ್ರ? ಪತ್ರಿಕೆ ಪ್ರಧಾನ ಸಂಪಾದಕ ಮದನ ಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕೃತಿ ಕುರಿತು ಹಿರಿಯ ಪತ್ರಕರ್ತ ಎಸ್. ಪ್ರಕಾಶ್ ಬಾಬು ಮಾತನಾಡುವರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು. ಕೂಡ್ಲಿ ಗುರುರಾಜ ಅವರು ?ಜನಮಿತ್ರ? ದಿನ ಪತ್ರಿಕೆಯಲ್ಲಿ ಬರೆದ ವ್ಯಕ್ತಿ– ವಿಶೇಷ ಅಂಕಣ ಬರಹಗಳ ಸಂಗ್ರಹ ಸಾಧನೆಯ ಶಿಖರಗಳು ಕೃತಿ ಎಂದು ಭಾರತೀ ಪ್ರಕಾಶನದ ಬಿ.ಎನ್. ಶ್ರೀನಿವಾಸ್ ತಿಳಿಸಿದ್ದಾರೆ.

## ಭೋಗೇಶ್ವರ ಕಾಲೋನಿ ಗ್ರಾಮದಲ್ಲಿ ಚಿರತೆ ಸೆರೆ

ಹೆಚ್ ಡಿ ಕೋಟೆ= ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದ ಶಿವಲಿಂಗೇಗೌಡ ಅವರ ಭುವನೇಶ್ವರಿ ಫಾರಂ ಹೌಸ್ ನಲ್ಲಿ ಬೆಳಗ್ಗೆ 6 ಗಂಟೆಯ ಸಮಯದಲ್ಲಿ ಹೆಣ್ಣು ಚಿರತೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ.

ತುಂಬಾ ದಿನಗಳಿಂದ ಶಿವಲಿಂಗೇಗೌಡ ಸೇರಿದಂತೆ ಅಕ್ಕಪಕ್ಕದ ಹಲವಾರು ರೈತರ ಜಮೀನುಗಳಲ್ಲಿ ಚಿರತೆಯ ಓಡಾಟ ನಡೆಯುತ್ತಿತ್ತು ಆದರೆ ಮನುಷ್ಯನ ಮೇಲೆ ಯಾವುದೇ ಪ್ರಾಣಪಾಯವಾಗಿರಲಿಲ್ಲ, ಚಿರತೆಯು ಇರುವ ಸುದ್ದಿಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಹಲವು ದಿನಗಳಿಂದ ಬೋನನ್ನು ಇಡಲಾಗಿತ್ತು ಈ ದಿನ ಬೆಳಗ್ಗೆ ಬೋನಿಗೆ ಸೆರೆಯಾಗಿದೆ.

ಗ್ರಾಮದ ರೈತ ಮುಖಂಡ ಹಾಗೂ ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಚಿರತೆ ಹಲವು ರೈತರ ಜಮೀನುಗಳಲ್ಲಿ ಓಡಾಟ ಮಾಡುತ್ತಿದ್ದರಿಂದ ರೈತರಿಗೆ ಜಮೀನುಗಳಿಗೆ ಹೋಗಿ ವ್ಯವಸಾಯ ಮಾಡುವುದು ಕಷ್ಟವಾಗಿತ್ತು. ರೈತರ ಜಮೀನುಗಳಿಗೆ ಕೂಲಿ ಕೆಲಸ ಮಾಡುವುದಕ್ಕೆ ಕಾರ್ಮಿಕರು ಹಿಂಜರಿಕೆ ಪಡುತ್ತಿದ್ದರು. ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಮಾಹಿತಿ ತಿಳಿಸಿ ಬೋನ್ ಹಿಡಿಸಲಾಗಿತ್ತು ಇಂದು ಬೆಳಗ್ಗೆ 6 ಗಂಟೆಯ ಸಮಯದಲ್ಲಿ ಸೆರೆಯಾಗಿದೆ ಇದರಿಂದ ರೈತರಿಗೆ ಕೂಲಿ ಕಾರ್ಮಿಕರಿಗೆ ಸಾರ್ವಜನಿಕರಿಗೆ ಚಿರತೆಯನ್ನು ಸೆರೆಹಿಡಿದಿರುವುದರಿಂದ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ ಎಂದು ಹೇಳಿದರು.



## ನಾಮ ನಿರ್ದೇಶಿತ ಸದಸ್ಯರ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು:– ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ 02 ವರ್ಷಗಳ ಅವಧಿಗೆ ಒಬ್ಬ ನಾಮ ನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಬೇಕಾಗಿದ್ದು, ಸದಸ್ಯರಾಗಬಯಸುವ ವಿಶ್ವಕರ್ಮ ಜನಾಂಗದವರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜೂನ್ 15 ರೊಳಗೆ ಜಾತಿ ಮತ್ತು ಪ್ರಮಾಣ ಪತ್ರ, ಆಧಾರ್ ಕಾರ್ಡ್ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಅನುಭವ ಪತ್ರ ದಾಖಲಾತಿಗಳನ್ನು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಕಚೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವವರು ಕನಿಷ್ಠ 35 ವರ್ಷದಿಂದ ಗರಿಷ್ಠ 65 ವರ್ಷ ವಯೋಮಿತಿಯೊಳಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 0821–2341194 ನ್ನು ಸಂಪರ್ಕಿಸಬಹುದೆಂದು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಹೆಚ್ ಶೋಭ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗಣಪತಿ ಶ್ರೀಗಳ ಜನ್ಮೋತ್ಸವ

## ವಿಕಲಚೇತನರಿಗೆ ಉಪಕರಣಗಳ ವಿತರಣೆ



ಮೈಸೂರು: ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 84ನೇ ಜನ್ಮೋತ್ಸವದ ಅಂಗವಾಗಿ 89 ಮಂದಿ ವಿಶೇಷಚೇತನರಿಗೆ ಸಲಕರಣೆಗಳನ್ನು ವಿತರಿಸಲಾಯಿತು.

ವಿಕಲಚೇತನರು ಮತ್ತು ಹಿರಿಯ ನಾಗರಿಕರ ಇಲಾಖೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಗಳ ಜಂಟಿ ಸಲಹೆ ಮತ್ತು ಸಹಯೋಗದೊಂದಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಈ ಕೊಡುಗೆಗಳನ್ನು ಹಸ್ತಾಂತರಿಸಲಾಯಿತು. ಆಶ್ರಮದ ವತಿಯಿಂದ ವಿತರಿಸಲಾದ ಒಟ್ಟು 89 ಅತ್ಯಾಧುನಿಕ ಹಾಗೂ ಅಗತ್ಯ ಉಪಕರಣಗಳ ವಿವರ

21 ವೀಲ್ ಚೇರ್(ಚಕ್ರದ ಕುರ್ಚಿ), ಕಮೋಡ್ ವೀಲ್ ಚೇರ್ 2, ವಾಕರ್ಸ್ 9, ಕ್ರಚಸ್ (ಬಗಲುಗೋಲು) 9, ಎಲ್ಬೊ ಕ್ರಚಸ್ 1, ವಾಕಿಂಗ್ ಸ್ಟಿಕ್ (ಊರುಗೋಲು) 5, ವೈಟ್ ಕೇನ್(ಅಂಧರ ಊರುಗೋಲು) 8, ವಿಶೇಷ ಸಿ.ಪಿ. ಚೇರ್ 18, ವಿಶೇಷ ಸಿ.ಪಿ. ಚೇರ್ 16, ಶ್ರೀರಾಮ ಮಂದಿರ ಪುನರ್ ನಿರ್ಮಾಣಕ್ಕೆ 10ಲಕ್ಷ ಧನಸಹಾಯ ನೀಡಿದರು.

ಇದೇ ಪಾವನ ಸಂದರ್ಭದಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಪ್ರಸಿದ್ದ ಶ್ರೀರಾಮ ಮಂದಿರದ ಪುನರ್ ನಿರ್ಮಾಣ ಕಾರ್ಯಕ್ಕಾಗಿ ಆಶ್ರ ಮದ ವತಿಯಿಂದ 10ಲಕ್ಷ ರೂ. ಆರ್ಥಿಕ ಸಹಾಯದ ಚೆಕ್ಕನ್ನು ದೇವಸ್ಥಾನದ ಸಮಿತಿಗೆ ಹಸ್ತಾಂತರಿಸಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಆಶ್ರಮದ ಬೆಂಬಲವನ್ನು ಘೋಷಿಸಲಾಯಿತು. ಆಶ್ರಮದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ಯಶಸ್ವಿಯಾಗಿ ನೆರವೇರಿತು.

# ಸಹಕಾರದಿಂದ ಶಿಕ್ಷಕರ ಸಮಸ್ಯೆಗಳಿಗೆ ಧ್ವನಿ



ಹನೂರು: ಶಿಕ್ಷಣ ಇಲಾಖೆಯ ಜೊತೆಗೆ ಶಿಕ್ಷಕರ ಯಾವುದೇ ಸಂಘಗಳಾದರೂ ಸಹ ಸಹಕಾರ ನೀಡುವುದರಿಂದ ಶಿಕ್ಷಕರ ಸಮಸ್ಯೆಗಳಿಗೆ ಧ್ವನಿಯಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರತಿಭಾ ತಿಳಿಸಿದರು.

ಪಟ್ಟಣದ ಬಿ ಆರ್ ಸಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಅವರು ಮಾತನಾಡಿದರು.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಎಲ್ಲಾ ಸದಸ್ಯರು ಕೂಡ ಶಿಕ್ಷಕರ ಶ್ರೇಯ ಅಭಿವೃದ್ಧಿಗೆ ಪಣತೊಟ್ಟು ಬಂದಿದ್ದೀರಿ. ಶಿಕ್ಷಕರ ಸಂಘ ಹಾಗೂ ಇಲಾಖೆ ಅಧಿಕಾರಿಗಳು ಇಬ್ಬರು ಸಮನ್ವಯದಿಂದ ಇದ್ದರೆ ಮಾತ್ರ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ಸಾಧ್ಯವಾಗುತ್ತದೆ ಆ ನಿಟ್ಟಿನಲ್ಲಿ ನಿಮ್ಮ ಸಲಹೆ ಸಹಕಾರ ಪಡೆದು ಮುಂದಿನ ದಿನಗಳಲ್ಲಿ ಶಿಕ್ಷಕರ ಸಮಸ್ಯೆಗಳನ್ನ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇಲ್ಲಿಯವರೆಗೂ ಬಗೆಹರಿಯದ ಸಮಸ್ಯೆಗಳಿದ್ದರೆ ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಖಂಡಿತ ಸಮಸ್ಯೆಗಳಿಗೆ ಮುಕ್ತಿ ಹಾಡೋಣ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷ ಮಾದೇಶ್ ಮಾದೇಶ್ ಮಾತನಾಡಿ ನೂತನವಾಗಿ ಆಗಮಿಸಿರುವ ಚಿತ್ರ ಶಿಕ್ಷಣಾಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುವುದಾದರೆ ಖಂಡಿತ ಎಲ್ಲರ ಸಹಕಾರ ಇದ್ದೇ ಇರುತ್ತದೆ. ಅದರ ಮೂಲಕ ಶಿಕ್ಷಕರ ಸಮಸ್ಯೆಗಳಿಗೆ ನಾವೆಲ್ಲರೂ ಕೂಡ ಸ್ಪಂದಿಸಬೇಕಾಗುತ್ತದೆ. ಜೊತೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸರ್ವ ಸದಸ್ಯರು ಕೂಡ ಕೈಜೋಡಿಸಿದಾಗ ಮಾತ್ರ ಯಾವುದೇ ಕಾರ್ಯಕ್ರಮಗಳು ಯಶಸ್ವಿಯಾಗುತ್ತದೆ ಎಂದರು. ಇದೇ ಸಂದರ್ಭದಲ್ಲಿ ಬಿ ಆರ್ ಸಿ ವೆಂಕಟೇಶ್, ದೈಹಿಕ ಶಿಕ್ಷಣ ಪರಿವೀಕ್ಷಕ ಚಂದ್ರಶೇಖರ್, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹನೂರು ಘಟಕದ ಅಧ್ಯಕ್ಷರಾದ ಮಾದೇಶ್, ಉಪಾಧ್ಯಕ್ಷ ಗಿರೀಶ್, ಪ್ರಧಾನ ಕಾರ್ಯದರ್ಶಿ ಮಹದೇಶ್ ಸಿ, ಖಜಂಚಿ ಶಿವಕುಮಾರಿ ಹಾಗೂ ನಿರ್ಗಮಿತ ಸಂಘದ ಸದಸ್ಯರು, ಈ ಸಿಓಗಳಾದ ಚಿನ್ನಪ್ಪಯ,ಮಹೇಶ್, ಅಶೋಕ್, ಸೇರಿದಂತೆ ನಿವೃತ್ತ ಶಿಕ್ಷಕರು ಹಾಗೂ ಹಾಲಿ ಶಿಕ್ಷಕರು ಉಪಸ್ಥಿತರಿದ್ದರು.

# ಎಆರ್‌ಕೆಗೆ ಸಚಿವ ಸ್ಥಾನ ನೀಡುವಂತೆ ಹೆಚ್ಚಿದ ಕೂಗು



ಚಾಮರಾಜನಗರ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ದಲಿತ ಸಂಘಟನೆಯ ಮುಖಂಡ ಹೊಂಗನೂರು ನಟರಾಜು ಒತ್ತಾಯಿಸಿದರು.

ಜಿಲ್ಲೆಯ ದಿ. ಬಿ. ರಾಚಯ್ಯ ರವರು ಕರ್ನಾ ಟಕದಲ್ಲಿ ಅಪಾರವಾದ ಕೊಡುಗೆಯನ್ನು ನೀಡಿದ್ದು, ಇವರು ಅರಣ್ಯ ಮಂತ್ರಿಯಾಗಿದ್ದಾಗ ಶೋಷಿತ ವರ್ಗಗಳಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಪಾರವಾದ ಕೊಡುಗೆ ನೀಡಿರುತ್ತಾರೆ. ಅವರ ಸುಪುತ್ರರಾದ ಎ.ಆರ್. ಕೃಷ್ಣಮೂರ್ತಿ ರವರು ಕೊಳ್ಳೇಗಾಲ ವಿಧಾನಸಭಾ ಸದಸ್ಯರಾಗಿದ್ದು, ಇವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಈ ಹಿಂದೆ ಎರಡು ಬಾರಿ ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಎ.ಆರ್. ಕೃಷ್ಣಮೂರ್ತಿ ಅವರು ಡಾ. ಬಿ.ಆರ್. ಅಂಬೇಡ್ಕರ್ ನಿಗಮದ ಅಧ್ಯಕ್ಷರಾಗಿ ಶೋಷಿತವರ್ಗಗಳಿಗೆ ಅಪಾರ ಕೊಡುಗೆ ನೀಡಿರುತ್ತಾರೆ. ಪ್ರಸ್ತುತ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಶಾಸಕರಾಗಿದ್ದು, ಒಳ್ಳೆಯ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ತಂದು ಚಾಮರಾಜನಗರ ಜಿಲ್ಲೆ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಒಂದುವೇಳೆ ಎ.ಆರ್. ಕೃಷ್ಣಮೂರ್ತಿ ರವರಿಗೆ ಸಚಿವ ಸ್ಥಾನ ಕೊಡದಿದ್ದ ಪಕ್ಷದಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಜಿಲ್ಲಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹೊಂಗನೂರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮಹಾದೇವಸ್ವಾಮಿ ಮಾತನಾಡಿ, ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಸಂದರ್ಭದಲ್ಲಿ ಚಾಮರಾಜನಗರದಿಂದ ಬೀದರ್ ವರೆಗೂ ಸಾಮುದಾಯದ ಜನರಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಪ್ರಸ್ತುತ ಕೊಳ್ಳೇಗಾಲ ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ದಲಿತ ಸಂಘಟನೆಯ ನಾಗೇಶ್ ಭೋಗಾಪುರ, ಸೋಮಸುಂದರ್ ಮಲ್ಲಯ್ಯನಪುರ, ಮಹದೇವಯ್ಯ, ರಾಜು ಹಾಜರಿದ್ದರು.

## ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಲೋಕ್ ಅದಾಲತ್

ಮೈಸೂರು:– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಸರ್ವೋಚ್ಚ ನ್ಯಾಯಾಲಯವು ವಿಶೇಷ ಲೋಕ್ ಅದಾಲತ್ ಅನ್ನು ದಿನಾಂಕ: 21.08.2026 ರಿಂದ 23.08.2026 ರವರೆಗೆ ನಡೆಸಲು ಉದ್ದೇಶಿಸಲಾಗಿದೆ. ಈ ಹಿನ್ನಲೆಯಲ್ಲಿ ಪಕ್ಷಕಾರರುಗಳಿಗೆ, ಎದುರುದಾರರ ಜೊತೆ ಪೂರ್ವಭಾವಿ ಲೋಕ್ ಅದಾಲತ್ ಅನ್ನು ನಡೆಸಲು ವಿಡಿಯೋ ಕಾನ್ಸರೆನ್ಸ್ ವ್ಯವಸ್ಥೆ ಮಾಡಲಾಗಿರುತ್ತದೆ. ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ವಿಡಿಯೋ ಕಾನ್ಸರೆನ್ಸ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿರುತ್ತದೆ.

ಎಲ್ಲಾ ಪಕ್ಷಕಾರರು ವಿಡಿಯೋ ಕಾನ್ಸರೆನ್ಸ್ ಮೂಲಕ ಸರ್ವೋಚ್ಚ ನ್ಯಾಯಾಲಯವು ನಡೆಸುವ ಪೂರ್ವಭಾವಿ ಲೋಕ್ ಅದಾಲತ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಲಾಗಿರುತ್ತದೆ. ಈ ವಿಶೇಷ ಲೋಕ್ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕೆ ಗುರುತಿಸಲಾದ ಪ್ರಕರಣಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ವರದಿಯಾಗಿರುತ್ತದೆ. ಇದರಿಂದ ಸದರಿ ಪ್ರಕರಣಗಳಲ್ಲಿನ ಎಲ್ಲಾ ಪಕ್ಷಕಾರರುಗಳು ತಮ್ಮ ವಾಸಸ್ಥಳಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ತೆರೆಯಲಾಗಿರುವ ವಿಡಿಯೋ ಕಾನ್ಸರೆನ್ಸ್ ಕೇಂದ್ರಗಳಿಗೆ ಭೇಟಿ ಕೊಟ್ಟು ದಿನಾಂಕ: 21.08.2026 ರಿಂದ 23.08.2026 ರವರೆಗೆ ನಡೆಯುವ ವಿಶೇಷ ಲೋಕ್ ಅದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ WWW.kslsa.kar.nic.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಹಾಗೂ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಸದಸ್ಯ ಕಾರ್ಯದರ್ಶಿಯವರನ್ನು ಮತ್ತು ಸಹಾಯವಾಣಿ ಸಂಖ್ಯೆ: 15100 ನ್ನು ಸಂಪರ್ಕಿಸಬಹುದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅಮರ್‌ನಾಥ್.ಕೆ.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಮನ ಸೆಳೆದ ವಾಕಥಾನ್

## ಚಾಮರಾಜನಗರದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ




ಚಾಮರಾಜನಗರ, ಮೈಸೂರಿನ ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ನಗರದಲ್ಲಿ ವಾಕಥಾನ್ ಏರ್ಪಡಿಸಲಾಗಿತ್ತು.

ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು, ರೆಡ್ ಕ್ರಾಸ್, ರೋಟರಿ ಕ್ಲಬ್ ಅಸೋಸಿಯೇಷನ್ ಹಾಗೂ ಬಸವರಾಜೇಂದ್ರ ಆಸ್ಪತ್ರೆ, ಚಾಮರಾಜನಗರ ಇವರ ಸಹಯೋಗದಲ್ಲಿ

ವಾಕಥಾನ್ ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ನಡೆಯಿತು. ಜಿ.ಪಂ.ಸಿಇಓ ಮೋನಾರೋತ್ ವಾಕಥಾನ್ ಗೆ ಚಾಲನೆ ನೀಡಿ ಮಾತನಾಡಿದರು. ಆರೋಗ್ಯಕ್ಕೆ ಮಾರಕವಾಗಿರುವ ತಂಬಾಕು ಸೇವನೆಯಿಂದ ದೂರವಿರಬೇಕು. ಧೂಮಪಾನ ಮತ್ತು ತಂಬಾಕಿನ ಉತ್ಪನ್ನಗಳನ್ನು ತ್ಯಜಿಸಿ ಆರೋಗ್ಯ ಕಾಪಾಡಿಕೊಳ್ಳಿ. ತಂಬಾಕು ಮುಕ್ತ ಸ್ವಸ್ಥ ಸಮಾಜ ಹಾಗೂ ಆರೋಗ್ಯವಂತ ಭಾರತವನ್ನು ರೂಪಿಸುವಲ್ಲಿ ಕೈಜೋಡಿಸಬೇಕು ಎಂದು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಗಂಗಾಧರ್ ಮಾತನಾಡಿ, ತಂಬಾಕು ಸೇವನೆಯಿಂದ ಜಗತ್ತಿನಲ್ಲಿ ಕೋಟ್ಯಾಂತರ ಸಾವು ಆಗುತ್ತಿದೆ. ಶಾಲಾ–ಕಾಲೇಜು ಹಂತದಲ್ಲಿ ಇದು ಹೆಚ್ಚಾಗುತ್ತಿದೆ. ಹೆಣ್ಣು ಮಕ್ಕಳು ಒಳಾಗಿರುವುದನ್ನು ಕಾಣುತ್ತಿದ್ದೇವೆ. ಇದು ವಿಷಾಧಕರ ಸಂಗತಿಯಾಗಿದೆ. ತಂಬಾಕನ್ನು ಒಬ್ಬರು ಸೇವನೆ ಮಾಡಿದರೆ ಅಕ್ಕಪಕ್ಕದವರಿಗೆ ತೊಂದರೆ ಉಂಟು ಮಾಡುತ್ತದೆ ಎಂದರು.

ಡಾ.ರವಿ ಮಾತನಾಡಿ ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳ ಬಗ್ಗೆ ಉದ್ಯಮಗಳ ಮೋಸಕಾರಿ ತಂತ್ರಗಳನ್ನು ಬಯಲಿಗೆಳೆಯುವುದು,ತಂಬಾಕು ಸೇವನೆಯ ಹಾನಿಕಾರಕ ಪರಿಣಾಮಗಳು ಹಾಗೂ ಕ್ಯಾನ್ಸರ್ ತಡೆಗಟ್ಟುವಿಕೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಾಕಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ವಾಕಥಾನ್ ನಲ್ಲಿ ಡಾ.ಶ್ವೇತ, ಡಾ.ರಕ್ಷಿತ್ ಶೃಂಗೇರಿ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಮಾಜಿ ಅಧ್ಯಕ್ಷ ಶ್ರೀನಿವಾಸನ್, ಸಿಮ್ಸ್ ಪ್ರಾಂಶುಪಾಲ

ಡಾ.ಅಜಯ್, ಐಟಿಐ ಕಾಲೇಜು ಪ್ರಾಂಶುಪಾಲ ಡಾ.ರಂಗಸ್ವಾಮಿ,ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ

ವಿಭಾಗೀಯ ಮುಖ್ಯಸ್ಥ ರವಿಕುಮಾರ್, ವ್ಯವಹಾರ ಮುಖ್ಯಸ್ಥ ಚಲಂ, ಮಾರ್ಕೆಟಿಂಗ್ ಮ್ಯಾನೇಜರ್ ಸುನೀಲ್ ಕುಮಾರ್, ಮೋಹನ್ ಕುಮಾರ್, ನಿತಿನ್, ವಿಮಲ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು..

### ಫ್ಯಾಷನ್‌ಗಾಗಿ ಧೂಮಪಾನ

**ಡಿಹೆಚ್ ಓ ಡಾ.ಚಿದಂಬರಂ ಮಾತನಾಡಿ, ತಂಬಾಕು ಸೇವನೆಯಿಂದ ಕ್ಯಾನ್ಸರ್ ರೋಗ ಹೆಚ್ಚಾಗಿದೆ. ಫ್ಯಾಷನ್‌ಗಾಗಿ ಧೂಮಪಾನ ಚಟಕ್ಕೆ ಯುವಜನಾಂಗ ಬಲಿಯಾಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ ಅಂತಹ ಮಾರಕ ತಂಬಾಕಿನ ಉತ್ಪನ್ನ ಗಳಿಂದ ದೂರವಿರಬೇಕು ಎಂದರು. ಬಸವರಾಜೇಂದ್ರ ಆಸ್ಪತ್ರೆಯ ಡಾ.ಬಸವರಾಜೇಂದ್ರ ಮಾತನಾಡಿ, ಕೇರಳ ರಾಜ್ಯ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ತಂಬಾಕು ನಿಷೇಧಿಸಲಾಗಿದೆ. ಅದೇ ರೀತಿ ರಾಜ್ಯದಲ್ಲೂ ನಿಷೇಧ ಮಾಡಲು ಸರ್ಕಾರ ಒಂದು ದೃಢ ನಿರ್ಧಾರ ಮಾಡಬೇಕು ಎಂದರು.**

# ಜಿಲ್ಲಾ ಪತ್ರಕರ್ತರ ಸಂಘದಿಂದ ಪ್ರತಿಭಾ ಪುರಸ್ಕಾರ



ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ 2025–2026ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಹಿರಿಯ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಮಾನಸಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣದಲ್ಲಿ ಶನಿವಾರ ನಡೆದ ಕಾಯಕ್ರಮದಲ್ಲಿ ಗಿಡಕ್ಕೆ ನೀರು ಹಾಕುವ ಮೂಲಕ ಶಾಸಕ ಜಿ.ಡಿ.ಹರೀಶ್ ಗೌಡ ಉದ್ಘಾಟನೆ ಮಾಡಿದರು. ಬಳಿಕ ಮಾತನಾಡಿದ ಅವರು, ಪತ್ರಕರ್ತರು ಮಾಡುವ ಕೆಲಸ ಮತ್ತು ಶ್ರಮಕ್ಕೆ ಸರಿಯಾದ ವೇತನ ಸಿಗುತ್ತಿಲ್ಲ, ಆದರೂ ಪತ್ರಕರ್ತರು ತಮ್ಮ ವೃತ್ತಿಯನ್ನು ಗೌರವಿಸಿ ಸಮಾಜದ ಅಂಕುಡೊಂಕು ತಿದ್ದುವ ಕೆಲಸವನ್ನು ಪ್ರಮಾಣಿಕವಾಗಿ ಮಾಡುತ್ತಿದ್ದಾರೆ ಎಂದು ಹೇಳಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಹೆಚ್ಚು ವಿದ್ಯಾವಂತರಾಗಿ ಪ್ರಜ್ಞಾವಂತರಾಗಬೇಕು, ಎಂತಹುದೆ ಕಷ್ಟ ಬಂದರು ಎದುರಿಸುತ್ತೇನೆ ಎಂಬ ಧೈರ್ಯ ಇರಬೇಕು ಮತ್ತು ಉತ್ತಮ ಪ್ರಜೆಗಳಾಗಬೇಕು ಎಂದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿದರು. ಕಾರ್ಯಕ್ರಮದ ಸಾನಿಧ್ಯವನ್ನು ಆದಿಚುಂ ಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ ವಹಿಸಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಜಿಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಉದ್ಯಮಿ ಶಿವಕುಮಾರ್, ಪ್ರಧಾನಕಾರ್ಯದರ್ಶಿ ಧರ್ಮಾಪುರ ನಾರಾಯಣ್, ನಗರ ಉಪಾಧ್ಯಕ್ಷ ರವಿ ಪಾಂಡವಪುರ, ಕಾರ್ಯದರ್ಶಿ ಕೃಷ್ಣೋಜಿರಾವ್, ಖಜಾಂಚಿ ಸುರೇಶ್, ಗ್ರಾಮಾಂತರ ಉಪಾಧ್ಯಕ್ಷ ವೆಂಕಟಪ್ಪ, ಕಾರ್ಯದರ್ಶಿ ದಾ.ರಾ.ಮಹೇಶ್ ಇದ್ದರು.

> **ಪತ್ರಕರ್ತರಿಗೆ ಕುಟುಂಬದವರ ಸಹಕಾರ ಇರುವುದರಿಂದಲೇ ಸಮಾಜದಲ್ಲಿ ಅವರು ಸಾಧನೆ ಮಾಡಲು ಸಾಧ್ಯ. ಅದರಲ್ಲೂ ನಿಮ್ಮ ಒತ್ತಡದ ನಡುವೆಯೂ ಮಕ್ಕಳನ್ನು ಶೈಕ್ಷಣಿಕವಾಗಿ ಮೇಲೆತ್ತುವ ಕೆಲಸ ಮಾಡುತ್ತಿರುವುದು ನೋಡಿದರೆ ತುಂಬ ಸಂತಸದ ವಿಷಯವಾಗಿದೆ. ಪತ್ರಕರ್ತರ ಸೇವೆ ಸಮಾಜಕ್ಕೆ ಮಾದರಿ. ಬೆಳಿಗ್ಗೆ ಎದ್ದು ಪತ್ರಿಕೆ ಓದಲಿಲ್ಲ ಎಂದರೆ ಸಮಾಧಾನ ಆಗುವುದಿಲ್ಲ. ದೇಶ ಸೇರಿದಂತೆ ಸ್ಥಳೀಯ ಎಲ್ಲಾ ವಿಚಾರಗಳನ್ನು ಸಂಗ್ರಹಿಸಿ ಸಮಾಜಕ್ಕೆ ಮುಟ್ಟಿಸುವ ಕೆಲಸ ಮಾಡುವ.**
>
> ▸▸ **ಶ್ರೀಸೋಮೇಶ್ವರನಾಥ ಸ್ವಾಮೀಜಿ** ಆದಿಚುಂಚನಗಿರಿ ಮಠ

# ಪುಟ್ಟರಂಗಶೆಟ್ಟಿಗೆ ಡಿಸಿಎಂ ಸ್ಥಾನ ನೀಡಿ




ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಉಪಮುಖ್ಯಮಂತ್ರಿ ಅಥವಾ ಉನ್ನತ ಹುದ್ದೆಯನ್ನು ನೀಡುವಂತೆ ಯಳಂದೂರು ತಾಲೂಕು ಹಿಂದುಳಿದ ವರ್ಗಗಳ ಯುವ ವೇದಿಕೆ ಸಂಸ್ಥಾಪಕ ಅಧ್ಯಕ್ಷರು, ವಕೀಲರಾದ ಶಿವರಾಜ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಪುಟ್ಟರಂಗಶೆಟ್ಟಿ ಅವರು ರಾಜ್ಯದ ಉಪ್ಪಾರ ಜನಾಂಗದ ಏಕೈಕ ಶಾಸಕರು. ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದಾರೆ. ಉಪ್ಪಾರ ಸಮಾಜ ಮತದಾರರು ಹೆಚ್ಚು ಇರುವ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಜಾಗೃತಿ ಮೂಡಿಸಿದ್ದಾರೆ. 2008ರಿಂದ ನಿರಂತರ ಆಯ್ಕೆಯಾಗಿದ್ದಾರೆ. ಜಿಲ್ಲಾ ಕೇಂದ್ರದಅಭಿವೃದ್ಧಿಗಾಗಿಶ್ರಮಿಸಿದ್ದಾರೆ.ಪುಟ್ಟರಂಗಶೆಟ್ಟಿ ಅವರು ಕಾಂಗ್ರೆಸ್ ಪಕ್ಷದಿಂದಲ್ಲೇ ರಾಜಕೀಯ ಆರಂಭಿಸಿದರು. ರಾಜ್ಯದಲ್ಲಿ ಉಪ್ಪಾರ ಸಮುದಾಯ 40 ಲಕ್ಷ ಜನಸಂಖ್ಯೆ ಇದ್ದು, ಅನೇಕ ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಆಗಾಗಿ ಮುಂದಿನ ಸಚಿವ ಸಂಪುಟದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಉಪ ಮುಖ್ಯಮಂತ್ರಿ, ಸಚಿವ ಸ್ಥಾನ ನೀಡಿ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷ ಪ್ರದೀಪ್ ಬಳೇಪೇಟೆ, ಗೌರವ ಅಧ್ಯಕ್ಷ ನಾಗೇಶ್, ಕಾರ್ಯ ದರ್ಶಿ ಕೆಸ್ತೂರು ಸಿದ್ದಪ್ಪಸ್ವಾಮಿ, ಯೋಗೇಶ್, ಅಯ್ಯನ ಸರಗೂರು ಮಠದ ಸಂಜಯ್ ಹಾಜರಿದ್ದರು.

# ಪ್ರಿಯಾಂಕ್ ಖರ್ಗೆಗೆ ಡಿಸಿಎಂ ಸ್ಥಾನ ನೀಡಿ



ಚಾಮರಾಜನಗರ, ಮುಂದಿನ ಸಚಿವ ಸಂಪುಟದಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕು ಎಂದು ವಕೀಲ ಆರ್.ಅರುಣ್ ಕುಮಾರ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರಿಯಾಂಕ್ ಖರ್ಗೆ ಅವರು ರಾಜ್ಯ ರಾಜಕೀಯದಲ್ಲಿ ಪ್ರಮುಖ ನಾಯಕರಾಗಿ ಗುರುತಿಸಿಕೊಂಡಿದ್ದು, ವಿರೋಧ ಪಕ್ಷದಲ್ಲಿದ್ದಾಗ ಬಿಟ್ ಕಾಯಿನ್ ಹಗರಣ, ಪಿಎಸ್ಐ ನೇಮಕಾತಿ ಹಗರಣ, ಶೇ.40% ಕಮಿಷನ್ ಆರೋಪ, ಕೋವಿಡ್ ಅವಧಿಯ ಅವ್ಯವಹಾರ ಹಾಗೂ ಗಂಗಾ ಕಲ್ಯಾಣ ಯೋಜನೆಯ

ಅಕ್ರಮಗಳಂತಹ ವಿಷಯಗಳನ್ನು ನಿರಂತರವಾಗಿ ಪ್ರಸ್ತಾಪಿಸಿ, ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿದ್ದಾರೆ ಕಾಂಗ್ರೆಸ್ ಗೆ ಒಳ್ಳೆಯ ಹೆಸರು ತಂದು ಕೊಡುವ ಮೂಲಕ ಸಂಘಟನೆ ಮಾಡುತ್ತಿದ್ದಾರೆ ಎಂದರು.

ಅಲ್ಲದೇ ಪ್ರಿಯಾಂಕ್ ಖರ್ಗೆ ಅವರು ಮೂರು ಬಾರಿ ಶಾಸಕರಾಗಿ ಹಾಗೂ ಸಚಿವರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು ಅವರಿಗೆ ಆಡಳಿತಾತ್ಮಕ ಅನುಭವವಿದ್ದು, ತಮಗೆ ವಹಿಸಲಾದ ವಿವಿಧ ಇಲಾಖೆಗಳ ನಿರ್ವಹಣೆಯಲ್ಲಿ ದಕ್ಷತೆ ತೋರಿದ್ದಾರೆ. ಆದ್ದರಿಂದ ಪ್ರಿಯಾಂಕ್ ಖರ್ಗೆಗೆ ಈ ಬಾರಿ ಸಚಿವ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಕೇಂದ್ರ, ರಾಜ್ಯ ವರಷ್ಠರನ್ನು ಆಗ್ರಹಿಸಿದರು ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ನಾಗಾ ರ್ಜುನ್ ಪೃಥ್ವಿ, ನಾಗಮ್ಮ, ಎನ್ ಎಸ್ ಯುಐ ಜಿಲ್ಲಾಧ್ಯಕ್ಷ ಮೋಹನ್ ನಗು, ತಾ.ಪಂ. ಮಾಜಿ ಸದಸ್ಯ ಕುಮಾರನಾಯ್ಕ, ,ರಾಜು ಹಾಜರಿದ್ದರು.

## ಸಭೆಯಿಂದ ಅರ್ಧಕ್ಕೆ ಹೊರ ನಡೆದ ಅಧ್ಯಕ್ಷ: ಖಂಡನೆ

ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2023–24,2024–25 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ ಹೊರ ನಡೆದ ಘಟನೆ ನಡೆಯಿತು.

ನಗರದ ಮಾನಸಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕಾರ್ಯಕ್ರಮದ ಮೊದಲಿಗೆ ಸಂಘದ ಕಾರ್ಯದರ್ಶಿ ಧರ್ಮಪುರನಾರಾಯಣ್ ಸಭೆಯ ಸೂಚನಾ ಪತ್ರ ಮತ್ತು ಹಿಂದಿನ ವರ್ಷ ಸರ್ವಸದಸ್ಯರ ಸಭೆಯನ್ನು ಮಂಡಿಸಿ ಅನುಮೋದನೆ ಪಡೆದರು. ಬಳಿಕ ಅಧ್ಯಕ್ಷರ ಭಾಷಣ ಆರಂಭಿಸಿ ಭಾಷಣ ಮುಗಿಯುತ್ತಿದ್ದಂತೆ ಸದಸ್ಯರು ಪ್ರಶ್ನೆ ಕೇಳಲಾರಂಭಿಸಿದರು. ಈ ವೇಳೆ ಸಭೆಯಿಂದ ಅಧ್ಯಕ್ಷರು ಮತ್ತು ಸಮಿತಿ ಸಭೆಯಿಂದ ಹೊರ ನಡೆಯುವ ಮೂಲಕ ಸಭೆ ಅರ್ಧಕ್ಕೆ ನಿಂತಿತ್ತು. ಸಭೆಯಲ್ಲಿ ಸದಸ್ಯರ ಸಮಸ್ಯೆ ಆಲಿಸಿದೇ ಹೊರ ನಡೆದ ಅಧ್ಯಕ್ಷರ ನಡೆಯನ್ನು ಖಂಡಿಸಿ ಕೆಲಸ ಸದಸ್ಯರು ಪ್ರತಿಭಟನೆ ನಡೆಸಿದರು. ಬಳಿಕ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ವಾರ್ಷಿಕ ಸಭೆಯ ಅನುಮೋದನೆಯನ್ನು ಪಡೆಯದೇ, ಸದಸ್ಯರ ಸಮಸ್ಯೆಗೂ ಸ್ಪಂದಿಸದೇ ಸಭೆಯನ್ನು ಅಪೂರ್ಣಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಘದ ಕಚೇರಿ ಎದುರು ಸಾಂಕೇತಿಕವಾಗಿ ಪ್ರತಿಭಟಿಸಿ, ಮತ್ತೊಮ್ಮೆ ಸರ್ವ ಸದಸ್ಯರ ಸಭೆ ಕರೆಯುವಂತೆ ಸದಸ್ಯರ ತಂಡು ದೂರು ನೀಡುತ್ತಿದ್ದೇವೆಂದರು. ಬಳಿಕ ಜಿಲ್ಲಾ ಉಪ ನೋಂದಣಾಧಿಕಾರಿಗೆ ದೂರು ನೀಡಿದರು. ಈ ವೇಳೆ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮಾಜಿ ಪ್ರದಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಸದಸ್ಯರಾದ ಸಿ.ಎಂ.ಕಿರಣ್ ಕುಮಾರ್, ಶಿವರಾಮು, ನಾರಾಯಣ್, ಬೀರೇಗೌಡ, ಹರ್ಷ ಉಪಸ್ಥಿತರಿದ್ದರು.

**ಚಾಮರಾಜನಗರ ತಾಲ್ಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಹೇಳಿಕೆ**

# ಯತೀಂದ್ರ ಸಿದ್ದರಾಮಯ್ಯಗೆ ಡಿಸಿಎಂ ಸ್ಥಾನ ನೀಡುವಂತೆ ಅಹಿಂದ ಆಗ್ರಹ




ಮೈಸೂರು: ಡಾ.ಯತೀಂದ್ರ ಸಿದ್ದರಾಮಯ್ಯಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿ, ಪ್ರಭಾವಿ ಖಾತೆ ನೀಡಬೇಕು. ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ತಕ್ಷಣ ಬಿಡುಗಡೆ ಮಾಡಿ ಅನುಷ್ಠಾನಗೊಳಿಸಬೇಕೆಂದು ಅಹಿಂದಾ ಸಂಘಟನೆ ಆಗ್ರಹಿಸಿದೆ.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಅಹಿಂದಾ ಮುಖಂಡ ಕೆ.ಎಸ್.ಶಿವರಾಮು ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ನಡೆಸಿದ ಸಭೆಯಲ್ಲಿ ಮುಖಂಡರು ಮಾತನಾಡಿ, ಸಿದ್ದರಾಮಯ್ಯ ಅವರು ಶೋಷಿತ ಸಮುದಾಯದ ನೇತಾರರಾಗಿದ್ದರು, ಬಡವರ ನಾಡಿಮಿಡಿತ ಅವರಿಗೆ ಚೆನ್ನಾಗಿ ಗೊತ್ತಿತ್ತು, ಇದರಿಂದ ಅವರು ಅನ್ನಭಾಗ್ಯ, ಕ್ಷೀರಭಾಗ್ಯ, ಗೃಹಲಕ್ಷ್ಮಿ ?ಮ, ಗೃಹಜ್ಯೋತಿ, ಯುವ ನಿಧಿ ಮುಂತಾದ ಯೋಜನೆಗಳನ್ನು ಜಾರಿಗೆ ತಂದರು. ಇದೀಗ ಅವರ ರಾಜೀನಾಮೆಯಿಂದ ಸೃಷ್ಟಿಯಾಗಿ ರುವ ಅಹಿಂದಾ ಸಮುದಾಯದಲ್ಲಿನ ಅಂತರ ತುಂಬಲು ಮತ್ತು ಅಹಿಂದ ಸಮುದಾಯಗಳ ನಾಯಕತ್ವದ ದೃಷ್ಟಿಯಿಂದಲೂ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಉಪ ಮುಖ್ಯಮಂತ್ರಿಯ ಹುದ್ದೆಯ ಜೊತೆಗೆ ಪ್ರಬಲ ಖಾತೆ ನೀಡಬೇಕು ಎಂದು ಸಭೆ ಒಕ್ಕೊರಲಿನಿಂದ ಆಗ್ರಹಿಸಿತು. ಜಿಲ್ಲಾ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್, ಮೊಗಣ್ಣಾಚಾರ್, ಮಡಿವಾಳ ಸಂಘದ ರಾಜ್ಯಾಧ್ಯಕ್ಷ ಮಂಜು ಶೆಟ್ಟಿ, ಅಹಿಂದ ಮುಖಂಡ ಪುಟ್ಟಸ್ವಾಮಿ, ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಎಚ್.ಎಸ್.ಪ್ರಕಾಶ್, ದಲಿತ ಮಹಾಸಭಾದ ಅಧ್ಯಕ್ಷ ರಾಜೇಶ್, ಅಹಿಂದ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಶಿವಣ್ಣ, ಚೆನ್ನಪ್ಪ, ಕೃಷ್ಣ, ಚಂದ್ರು, ಲೋಕೇಶ್ ಕುಮಾರ್ ಮಾದಾಪುರ, ವಿಶ್ವಕರ್ಮದ ಮುಖಂಡ ಕೆಂಡಗಣ್ಣ, ಕಾಳೇಗೌಡ, ಮಹದೇವಮ್ಮ, ಜಯಲಕ್ಷ್ಮಿ, ಛಾಯಾಮ್ಮ, ದೇವನೂರು ಮಹಾದೇವಮ್ಮ ಇನ್ನಿತರರು ಹಾಜರಿದ್ದರು.

### ಅಹಿಂದ ಸಮುದಾಯಗಳಿಗೆ 4 ಸ್ಥಾನಕ್ಕೆ ಒತ್ತಾಯ

**ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಿಗೆ ಸಚಿವ ಸಂಪುಟದಲ್ಲಿ ಸಮಾನ ಪ್ರಾತಿ ನಿಧ್ಯ ಕಲ್ಪಿಸಬೇಕು. ನಾಮ ನಿರ್ದೇಶಿತ ವಿಧಾನ ಪರಿಷತ್ ಸದಸ್ಯ 9 ಸ್ಥಾನದಲ್ಲಿ ಅಹಿಂದ ಸಮು ದಾಯಗಳಿಗೆ 4 ಸ್ಥಾನವನ್ನು ಕೊಡಲೇಬೇಕು. ನಿಗಮ–ಮಂಡಳಿಗಳ ಅಧ್ಯಕ್ಷ ಹಾಗೂ ಸದಸ್ಯರ ಹುದ್ದೆಗಳಲ್ಲಿ ಶೇ.50ರಷ್ಟು ಸ್ಥಾನಗಳನ್ನು ಅಹಿಂದ ಸಮುದಾಯ ಗಳಿಗೆ ಮೀಸಲಿಡಬೇಕು. ಜಾತಿ ಗಣತಿ ವರದಿಯ ಶಿಫಾರಸುಗಳನ್ನು ಜಾರಿಗೆ ತಂದು ಅಹಿಂದ ಸಮುದಾ ಯಗಳಿಗೆ ರಾಜಕೀಯ ನ್ಯಾಯ ಒದಗಿಸಬೇಕು. ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯವಾಗಿ ಅನಾಹುತ ಉಂಟಾಗಲಿದೆ ಎಂದು ಸಭೆ ಎಚ್ಚರಿಕೆ ನೀಡಿತು. ಸಭೆಯಲ್ಲಿ ಕುರುಬ, ಮಡಿವಾಳ, ವಿಶ್ವಕರ್ಮ, ಬೆಸ್ತ, ನಾಯಕ, ಉಪ್ಪಾರ, ಕುಂಬಾರ, ಅಲ್ಪಸಂಖ್ಯಾತ, ಕ್ರೈಸ್ತ ಸೇರಿ ಸೂಕ್ಷ್ಮ ಸಮುದಾಯ ಗಳ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಂತರ ಅಹಿಂದ ಸಮುದಾಯದ ರಾಜ ಕೀಯ ನಾಯಕತ್ವವನ್ನು ಡಾ.ಯತೀಂದ್ರ ಸಿದ್ದ ರಾಮಯ್ಯ ಅವರು ವಹಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಈ ಸಂಬಂಧ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರುವ ನಿರ್ಣಯವನ್ನೂ ಸಹ ಸಭೆ ಕೈಗೊಂ ಡಿತು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಶೋಷಿತ ಸಮುದಾಯಗಳಿಗೆ ಅಘಾತ ತಂದೊಡ್ಡಿದೆ. ಸ್ವಜನ ಪಕ್ಷಪಾತ, ಸ್ವಜಾತಿಯ ವ್ಯಾಮೋಹದಲ್ಲಿ ಸಿದ್ದರಾಮಯ್ಯ ಅವರು ಎಂದಿಗೂ ಆಡಳಿತ ನಡೆಸಿಲ್ಲ. ಜನರ ಕಲ್ಯಾಣಕ್ಕಾಗಿ ಇಡೀ ರಾಜಕೀಯ ಜೀವನವನ್ನೆ ಮುಡಿಪಾಗಿಟ್ಟರು. ದೇಶದ ಬಡವರ, ಅಹಿಂದ ವರ್ಗಗಳ ಪರವಾಗಿ ನಿಲ್ಲುವ ಕಾಂಗ್ರೆಸ್ ಪಕ್ಷ ಉಳಿಯಬೇಕು, ಅಧಿಕಾರದಲ್ಲಿ ಮುಂದುವರಿಯ ಬೇಕು ಎಂದರೆ ಸಿದ್ದರಾಮಯ್ಯ ಅವರ ನಾಯಕತ್ವ ಅನಿವಾರ್ಯ ಎಂದು ಹೇಳಿದರು.**

# ಎಸ್ ಐ ಆರ್ ಪ್ರಕ್ರಿಯೆ ರದ್ದುಗೊಳಿಸುವಂತೆ ಪ್ರತಿಭಟನೆ

ಎಚ್.ಡಿ.ಕೋಟೆ: ಕೇಂದ್ರ ಸರ್ಕಾರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷ ರಾಜಕೀಯ ಷಡ್ಯಂತ್ರದಿಂದ ಮತದಾರರ ಪಟ್ಟಿಪರಿಷ್ಕರಣೆ ನೆಪದಲ್ಲಿ ಕೆಲವರ ಹಕ್ಕುಗಳನ್ನು ಕಸಿದು, ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ನಡೆಯುತ್ತಿದೆ ಎಂದು ಆರೋಪಿಸಿ ಸಂವಿಧಾನ ಸಂರಕ್ಷಣಾ ಪಡೆ ಮತ್ತು ಎಲ್ಲಾ ಜನಾಂಗ, ಧರ್ಮದ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಪ್ರಗತಿಪರ ಮುಖಂಡರಾದ ಅಕ್ಬರ್ ಪಾಷ, ಚಾ ನಂಜುಂಡಮೂರ್ತಿ, ಮುದ್ದುಮಲ್ಲಯ್ಯ, ಸ್ಟುಡಿಯೋ ಪ್ರಕಾಶ್, ವಕೀಲ ಶಿವರಾಜ್ ಮಾತನಾಡಿ, ಖಖಖ ಎಂಬುದು ಸಂವಿಧಾನ ವಿರೋಧಿ, ಪ್ರಜಾತಂತ್ರಕ್ಕೆ ಮಾರಕವಾದ, ಪ್ರತಿಯೊಬ್ಬ ಪ್ರಜೆಯನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸುವ, ದುರುದ್ದೇಶಪೂರಿತ ಪ್ರಕ್ರಿಯೆಯಾಗಿದೆ. ಇದು ಈ ದೇಶದಲ್ಲಿ ಮತದಾನದ ಹಕ್ಕಿಲ್ಲದ ಎರಡನೇ ದರ್ಜೆಯ ಪ್ರಜೆಗಳನ್ನು ಸೃಷ್ಟಿಸುವ ಪ್ರಕ್ರಿಯೆಯ ಪ್ರಾರಂಭವಾಗಿದೆ ಎಂದು ತಿಳಿಸಿದರು.

ಈ ಪ್ರಕ್ರಿಯೆ ವಿಶೇಷವಾಗಿ ಮಹಿಳೆಯರನ್ನು, ವಲಸೆ ಕಾರ್ಮಿಕರನ್ನು, ಅಲೆಮಾರಿ, ಆದಿವಾಸಿ, ದಮನಿತ





ಸಮುದಾಯಗಳನ್ನು ಹಾಗೂ ಅಲ್ಪಸಂಖ್ಯಾತರನ್ನು ಬೃಹತ್ ಸಂಖ್ಯೆಯಲ್ಲಿ ಪ್ರಜಾತಾಂತ್ರಿಕ ಪ್ರಕ್ರಿಯೆಯಿಂದ ಹೊರದಬ್ಬುತ್ತಿದೆ. ಖಖಖ ಪ್ರಕ್ರಿಯೆಯಿಂದ ಹೊರ ಹಾಕಿದವರಿಗೆ ಯಾವ ಸರ್ಕಾರಿ ಸೌಲಭ್ಯಗಳೂ ದೊರಕುವುದಿಲ್ಲ ಎಂದು ಬಿಜೆಪಿ ಆಡಳಿತರೂಢ ರಾಜ್ಯಗಳ ಮುಖ್ಯಮಂತ್ರಿಗಳು ಘೋಷಿಸುತ್ತಿದ್ದಾರೆ. ಖಖಖ ನಡೆದ ರಾಜ್ಯಗಳಲ್ಲಿ ಇದುವರೆಗೆ 6.5 ಕೋಟಿ ಮತದಾರರನ್ನು ಮತ ಪಟ್ಟಿಯಿಂದ ತೆಗೆಯಲಾಗಿದೆ ಎಂದರು.

### ಪರಿಷ್ಕರಣೆ ಪ್ರಕ್ರಿಯೆಯೆಲ್ಲಿ

ಕನಿಷ್ಟ ಅರ್ಹ ಮತದಾರರು ಇದ್ದಾರೆ ಎಂಬುದು ಅನೇಕ ಅಧ್ಯಯನಗಳು ನಿರೂಪಿಸಿವೆ. ಪಶ್ಚಿಮ ಬಂಗಾಳದಲ್ಲಿ ದಾಖಲೆಗಳಿದ್ದರೂ 27 ಲಕ್ಷ ಜನರಿಗೆ ಮತದಾನದ ಹಕ್ಕನ್ನು ನಿರಾಕರಿಸಿದ್ದು ಅಕ್ಷಮ್ಯ ಅಪರಾಧ. ಅಲ್ಲಿ ಬಳಸಲಾದ ಲಾಜಿಕಲ್ ಡಿಸ್ಕ್ರಿಪೆನ್ಸಿ ಸಾಫ್ಟ್ ವೇರ್ ಸೃಷ್ಟಿಸಿದ ಅವಾಂತರ ಹಾಗೂ ಅದರ ಹಿಂದಿನ ರಾಜಕೀಯ ದುರುದ್ದೇಶ ನ್ಯಾಯಾಂಗಕ್ಕೆ ಕಾಣದಿದ್ದರೂ ಇಡೀ ದೇಶದ ಜನರ ಕಣ್ಣಿಗೆ ನಿಚ್ಚಳವಾಗಿ ಗೋಚರಿಸಿದೆ ಎಂದರು.

ನಾವು ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯ ಪರವಾಗಿ ಇದ್ದೇವೆ. ಆದರೆ, ಹೆಸರಲ್ಲಿ ಬರುತ್ತಿರುವ ಈ ದುಷ್ಟ ಹಾಗೂ ದೋಷ ಪೂರಿತ ಪ್ರಕ್ರಿಯೆಯನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ಆಕ್ರೋಶ ಹೊರ ಹಾಕಿ, ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಚಾಮರಾಜು, ಮನುಗನಹಳ್ಳಿ ಮಾದಪ್ಪ, ಚೆನ್ನೀಪುರ ಚೆಲುವರಾಜು, ಮಂಜು ಹೊಸಮಾಳ, ಶಿವಣ್ಣ ಸರಗೂರು, ಚೆನ್ನೀಪುರ ಮಲ್ಲೇಶ್, ಕಂದೇಗಾಲ ಶಿವರಾಜು, ಕೆಂಡಗಣಸ್ವಾಮಿ, ಹೈರಿಗೆ ಶಿವರಾಜು, ಕ್ರಾಂತಿ ಕುಮಾರ್, ಮಹೇಶ್ ಚೆಲುವರಾಜ್, ಜೀವಿಕ ಬಸವರಾಜು, ಸದಾಶಿವಕೋಟೆ ಕೆಂಪಶೆಟ್ಟಿ, ಶೈಲಾಸುಧಾಮಣಿ, ಶಿವಪ್ಪಶೆಟ್ಟಿ, ಎಚ್.ಬಿ ಚೆಲುವರಾಜು, ಗಣೇಶ್ ಪುಟ್ಟಮಾದು, ರಹಮದ್ ಖಾನ್, ಟಿ. ಎಲ್.ಸ್ವಾಮಿ ಮುಂತಾದವರು ಭಾಗವಹಿಸಿದ್ದರು.

### ಸರ್ಕಾರಕ್ಕೆ ಕೆಲವು ಹಕ್ಕೋತ್ತಾಯಗಳ ಸಲ್ಲಿಕೆ

- ಲಾಜಿಕಲ್ ಡಿಸ್ಕ್ರಿಪೆನ್ಸಿ ಎನ್ನುವ ಅತಂತ್ಯ ಅವೈಜ್ಞಾನಿಕ, ಅವಾಸ್ತವಿಕ, ಅಪಾರದರ್ಶಕ ಹಾಗೂ ದುರುದ್ದೇಶಪೂರಿತ ರವಿ ಕರ್ನಾಟಕದಲ್ಲಿ ಯಾವುದೇ ಕಾರಣಕ್ಕೂ ಅಳವಡಿಸಬಾರದು.
- ಸ್ಪೆಲ್ಲಿಂಗ್, ದಿನಾಂಕ ಇಂತಹ ಕ್ಷುಲ್ಲಕ ವಿಚಾರಗಳನ್ನು ಇಟ್ಟುಕೊಂಡು ಮತದಾನದ ಹಕ್ಕಿನಿಂದ ಯಾರನ್ನೇ ಹೊರಗಿಡಬಾರದು.
- ಮತದಾರರ ಪಟ್ಟಿ ಎಂಬುದು ರಹಸ್ಯ ದಾಖಲೆಯಲ್ಲ. ಅದು ದೇಶದ ಮತದಾರರ ಮುಕ್ತ ಪಟ್ಟಿ. ಕರಡು ಪಟ್ಟಿ ತಯಾರಾದ ನಂತರ ಯಾರ ಮತವನ್ನಾದರೂ ಸುಲಭವಾಗಿ ಹುಡುಕಬಹುದಾದ ರೀತಿಯಲ್ಲಿ, ಪಾರದರ್ಶಕತೆ ಇರುವ ರೀತಿಯಲ್ಲಿ ಅದನ್ನು ಕಂಪ್ಯೂಟರ್ ರೀಡಬಲ್ ಫಾರ್ಮ್ಯಾಟಿನಲ್ಲಿ ನೀಡಬೇಕು.
- ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಮುನ್ನ ಚುನಾವಣಾ ಆಯೋಗದ ಮ್ಯಾನ್ಯುಯಲ್ನಲ್ಲಿ ಇರುವ ನಿಯಮವನ್ನು ಕಡ್ಡಾಯ ಪಾಲಿಸಬೇಕು
- ಪ್ರತಿ ಗ್ರಾಪಂ ಮತ್ತು ವಾರ್ಡ್ ಪ್ರದೇಶಗಳಲ್ಲಿ ಆ ಭಾಗದ ಮತದಾರರ ಕರಡು ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸಿ, ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಿ, ಮುಕ್ತವಾದ ರೀತಿಯಲ್ಲಿ ಎಲ್ಲರ ಸಮ್ಮುಖದಲ್ಲಿ ತಿದ್ದುಪಡಿ ಮಾಡಬೇಕು.
- ಮತದಾರರ ಪಟ್ಟಿಯ ಪರಿಶೀಲನೆ ನಡೆಸಿ ಕರಡು ಪಟ್ಟಿ ತಯಾರಿಸಲು. ಕರಡನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಲು ಹಾಗೂ ಅಹವಾಲುಗಳನ್ನು ಸ್ವೀಕರಿಸಿ ಅಂತಿಮ ಪಟ್ಟಿ ತಯಾರಿಸಲು 6 ತಿಂಗಳು ಸಮಯ ಇರಬೇಕು.
- ವಿವಾಹಿತ ಮಹಿಳೆಯರು, ವಲಸೆ ಕಾರ್ಮಿಕರು, ವಿದ್ಯಾರ್ಥಿಗಳು ಅಲೆಮಾರಿಗಳು, ಆದಿವಾಸಿಗಳು, ದಲಿತರು, ಬಡ ಅಲ್ಪಸಂಖ್ಯಾತರು ಮುಂತಾದ ದಾಖಲೆಗಳ ಗಂಭೀರ ಸಮಸ್ಯೆ ಎದುರಿಸುತ್ತಿರುವ ಜನ ವರ್ಗಗಳು ಪ್ರಜಾತಾಂತ್ರಿಕ ಪ್ರಕ್ರಿಯೆಯಿಂದ ವಂಚಿತರಾಗದಂತೆ ಒಳಗೊಳ್ಳಲು ಅವರಿಗಾಗಿ ವಿಶೇಷ ಸರಳ ಕ್ರಮಗಳನ್ನು ರೂಪಿಸಬೇಕು.

## "ನೈಸರ್ಗಿಕದತ್ತವಾದ ಮುಟ್ಟಿನ ಬಗ್ಗೆ ಕೀಳರಿಮೆ ಬೇಡ"

### ಮಹಿಳೆಯರಿಗೆ ಡಾ.ಆಲೀಂಪಾಶ ಕಿವಿಮಾತು

ಗುಂಡ್ಲುಪೇಟೆ: ತಾಲ್ಲೋಕಿನ ಅಣ್ಣೂರುಕೇರಿ ಶನೇಶ್ವರ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ವತಿಯಿಂದ "ಅಂತರಾಷ್ಟ್ರೀಯ ಮುಟ್ಟಿನ ನೈರ್ಮಲ್ಯ ದಿನಾಚರಣೆ" ಕಾರ್ಯಕ್ರಮ ಕಾರ್ಯಕ್ರಮದಲ್ಲಿ ತಾಲ್ಲೂಕು ವೈದ್ಯಾಧಿಕಾರಿ. ಡಾಕ್ಟರ್ ಅಲಿಂ ಪಾಷಾ ಬಿ. ಆರ್ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಿದ್ದ ಅವರು ಮಹಿಳೆಯರು ಮುಟ್ಟಿನ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿಯನ್ನು ಪಡೆದು ಜಾಗೃತಿ ಹೊಂದಿ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಬೇಕು. ಮುಟ್ಟು ಒಂದು ಸಹಜ ನಿಸರ್ಗದತ್ತವಾಗಿದ್ದು ಅದರ ಬಗ್ಗೆ ಕೀಳರಿಮೆಯ ಅಗತ್ಯ ಇಲ್ಲ ಹಾಗೂ ಮುಟ್ಟಿನ ಪ್ರಕ್ರಿಯೆ ಕುರಿತು ಸವಿವರವಾಗಿ ಮಾಹಿತಿಯನ್ನು ತಿಳಿಸಿದರು.

ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಪ್ತ ಸಮಾಲೋಚಕರಾದ ಜ್ಯೋತಿ ರವರು ಮುಟ್ಟಿನ ಬಗ್ಗೆ ಇರುವ ಮೌಢ್ಯತೆಗಳ ಕುರಿತು ತಿಳಿಸಿ ಅದಕ್ಕೆ ಸಂಬಂಧಿಸಿದ ವೈಜ್ಞಾನಿಕ ವಿಚಾರಗಳನ್ನು ಸ್ಪಷ್ಟಪಡಿಸಿ ಇತ್ತೀಚಿನ ದಿನಗಳಲ್ಲಿ ಶ್ರಮದ ಕೆಲಸಗಳು ಇಲ್ಲದ ಕಾರಣ ಅವುಗಳ ಆಚರಣೆಯ ಅಗತ್ಯವಿಲ್ಲವೆಂದು ಮಾಹಿತಿಯನ್ನು ನೀಡಿದರು.

ಸೂಪರ್ ವೈಸರ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸೋನಿಯಾ. ಮಾತನಾಡಿ ಹದಿಹರೆಯದ ವಯಸ್ಸಿನಲ್ಲಿ ವಿರುದ್ಧ ಲಿಂಗದ ಕಡೆ ಆಕರ್ಷಣೆಯಾಗುವುದು ಸಹಜ ಕ್ರಿಯೆ ಅದರ ಬಗ್ಗೆ ನಾವು ಗಮನವಿಟ್ಟು ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ನಮ್ಮ ತಾಲ್ಲೂಕಿನಲ್ಲಿ ಹದಿಹರೆಯದ ಹೆಣ್ಣು ಮಕ್ಕಳು ಪ್ರೀತಿ ಪ್ರೇಮಕ್ಕೆ ಬಲಿಯಾಗಿ ಮನೆಯನ್ನು ಬಿಟ್ಟು ಹೋಗುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು ಹೆಣ್ಣು ಮಕ್ಕಳು ಓದುವ ಕಡೆ ಹೆಚ್ಚು ಗಮನವನ್ನು ನೀಡಬೇಕೆಂದು ಇತರೆ ವಿಷಯಗಳನ್ನು ಮನಸ್ಸಿನಿಂದ ದೂರವಿಟ್ಟು ಮಾನಸಿಕ ಸ್ವಾಸ್ಥತೆಯನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಅಣ್ಣೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿಲ್ಪ ರವರು ಮಾತನಾಡಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯವರು ನಮ್ಮ ಗ್ರಾಮದಲ್ಲಿ ಈ ಕಾರ್ಯಕ್ರಮವನ್ನು ಮಾಡುವ ಮೂಲಕ ಜನರಿಗೆ ಮುಟ್ಟಿನ ಬಗ್ಗೆ ಅರಿವನ್ನು ಮೂಡಿಸಿರುವುದು ಶ್ಲಾಘನೀಯ ಹಾಗೂ ಈ ರೀತಿಯ ಕಾರ್ಯಕ್ರಮಗಳು ಇಂದೇ ಫಲಪ್ರಧವಾಗದಿದ್ದರು ಮುಂದಿನ ದಿನಗಳಲ್ಲಿ ಕಿಶೋರಿಯರಿಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರವಾಗುತ್ತದೆ. ಮನೆಯಲ್ಲಿರುವ ಪುರುಷರು ಮಹಿಳೆಯರಿಗೆ ಸಹಕಾರ ನೀಡುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ನೆರವಾಗಬೇಕೆಂದು ತಿಳಿಸಿದರು.

.ಆರ್ ಎಲ್ ಎಚ್ ಪಿ ಸಿಬ್ಬಂದಿ ಯಮುನಾ ರವರು ಕಾರ್ಯಕ್ರಮ ಮಾಡುತ್ತಿರುವ ಉದ್ದೇಶವನ್ನು ಸವಿವರವಾಗಿ ವಿವರಿಸಿ. ಗ್ರಾಮದ ಬೀದಿ ಬೀದಿಗಳಲ್ಲಿ ಜಾತವನ್ನು ಮಾಡುವ ಮೂಲಕ ಮಹಿಳೆಯರು ಮತ್ತು ಕಿಶೋರಿಯರು ಜನರಿಗೆ ಜಾಗೃತಿಯನ್ನು ಮೂಡಿಸಿದರು ಹಾಗೂ ಪ್ರತಿಜ್ಞಾವಿಧಿಯನ್ನು ಸ್ವೀಕರಿಸುವ ಮೂಲಕ ಮೂಢನಂಬಿಕೆ ಮತ್ತು ಕಟ್ಟುಪಾಡುಗಳಿಂದ ಹೊರಗೆ ಇದ್ದು ಸಮಾಜವನ್ನು ಉತ್ತಮವಾಗಿ ಬೆಳೆಯಲು ಸಕ್ರಿಯವಾಗಿ ನೆರವಾಗುತ್ತೇವೆಂದು ತಿಳಿಸಿದರು.

## ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆ

ಮೈಸೂರು:- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ 2026 ನೇ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಬಾರಿಯ ಖಟಿಖಿಡಿಜಜ ಛಥಿ ಓಚಿಣಣಡಿಜ, ಈಡಿ ಅಟುಟಚಿಣಜ, ಈಡಿ ಔಡಿ ಈಣಣಣಡಿಜ, (ಪ್ರಕೃತಿಯಿಂದ ಪ್ರೇರಿತಗೊಂಡು, ಉತ್ತಮ ಹವಮಾನಕ್ಕಾಗಿ ಹಾಗೂ ನಮ್ಮ ಭವಿಷ್ಯಕ್ಕಾಗಿ) ಈ ವಿಷಯವಾಗಿ ಮೈಸೂರು ಜಿಲ್ಲೆ ಹಾಗೂ ಎಲ್ಲಾ ತಾಲ್ಲೂಕು ಮಕ್ಕಳಲ್ಲಿ ಅರಿವು ಮೂಡಿಸಲು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಜೂನ್ 02 ರಂದು ಬೆಳಗ್ಗೆ 10:30 ಗಂಟೆಯಿಂದ ಮಧ್ಯಾಹ್ನ 12:30 ಗಂಟೆವರೆಗೆ ಕಲಾಮಂದಿರದ ಆವರಣ, ವಿನೋಭ ರಸ್ತೆ, ಕುಕ್ಕರಳ್ಳಿ, ಮೈಸೂರು ಇಲ್ಲಿ ಏರ್ಪಡಿಲಾಗಿದೆ.

ಚಿತ್ರಕಲೆ ಸ್ಪರ್ಧೆಯಲ್ಲಿ 1 ರಿಂದ 8 ನೇ ತರಗತಿ ವಿದ್ಯಾರ್ಥಿಗಳಿಗೆ (ವಿಭಾಗ-1: 1 ರಿಂದ 4 ನೇ ತರಗತಿ, ವಿಭಾಗ-2: 5 ರಿಂದ 7 ನೇ ತರಗತಿ ವಿದ್ಯಾಥಿಗಳಿಗೆ, ವಿಭಾಗ-3: 8 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ) ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ 8 ರಿಂದ 10 ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ ಸಂ: 7019033602 ನ್ನು ಸಂಪರ್ಕಿಸಬಹುದು

# ರೇವಣ್ಣ, ಯತೀಂದ್ರಗೆ ಸಚಿವ ಸ್ಥಾನ ನೀಡಿ

## ಕುರುಬ ಸಮುದಾಯದ ಘನತೆ ಎತ್ತಿಹಿಡಿದ ಸಿದ್ದರಾಮಯ್ಯ: ಯಲಿಯೂರು ನಾಗಣ್ಣ

ಚನ್ನಪಟ್ಟಣ: ರಾಜ್ಯ ಸರ್ಕಾರದ ನೂತನ ಸಂಪುಟದಲ್ಲಿ ಕುರುಬ ಸಮುದಾಯದ ಹಿರಿಯ ನಾಯಕ ಎಚ್.ಎಂ.ರೇವಣ್ಣ ಮತ್ತು ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಚನ್ನಪಟ್ಟಣ ತಾಲ್ಲೂಕು ಕುರುಬರ ಸಂಘದ ಮಾಜೀ ಅಧ್ಯಕ್ಷ ಹಾಗು ಸಮುದಾಯದ ಹಿರಿಯ ಮುಖಂಡ ಯಲಿಯೂರು ನಾಗಣ್ಣ ಆಗ್ರಹಿಸಿದ್ದಾರೆ.

ಚನ್ನಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಹೈಕಮಾಂಡ್ ಆದೇಶಕ್ಕೆ ತಲೆಬಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಸಿದ್ದರಾಮಯ್ಯ, ಹಾಲುಮತದ ಜನ ಕೊಟ್ಟ ಮಾತಿನಂತೆ ನಡೆಯುತ್ತಾರೆ ಎಂದು ನಿರೂಪಿಸಿದ್ದಾರೆ. ಅಹಿಂದ ಸೇರಿದಂತೆ ಎಲ್ಲ ಸಮುದಾಯಗಳಿಗೆ ಸಮಾನ ಅಧಿಕಾರ ನೀಡಿ, ಉತ್ತಮ ಆಡಳಿತ ನೀಡಿದ್ದಾರೆ. ಕಳಂಕ ರಹಿತ ಆಡಳಿತಕ್ಕೆ ಕಾರಣರಾಗಿದ್ದಾರೆ. ಸಮುದಾಯದ ಘನತೆಯನ್ನು ಎತ್ತಿಹಿಡಿದಿದ್ದಾರೆ. ಗ್ರಾಮಪಂಚಾಯ್ತಿ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಡಲು ನಾಟಕವಾಡುವ ಮಂದಿ ಇರುವ ಈ ಕಾಲದಲ್ಲಿ ಸಿದ್ದರಾಮಯ್ಯ ತಾವು ನುಡಿದಂತೆ ನಡೆದಿದ್ದಾರೆ. ಅವರ ನಡೆ ದೇಶದ ರಾಜಕರಣಕ್ಕೆ ಮಾದರಿಯಾಗಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಅತ್ಯುತ್ತಮ ಸ್ಥಾನಮಾನ ಕೊಡಬೇಕು ಹಾಗೂ ಅದೇ ಸಮುದಾಯದ ಎಚ್.ಎಂ.ರೇವಣ್ಣ ಮತ್ತು ಡಾ.ಯತೀಂದ್ರ ಅವರಿಗೆ ಮುಂಬರುವ ಮುಖ್ಯಮಂತ್ರಿಗಳು ಸಚಿವ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿದರು.

ಮುಂದಿನ ಸಂಪುಟದಲ್ಲಿ ಪಕ್ಷ ಸಂಘಟನೆಗೆ ಕುರುಬ ಸಮುದಾಯದ ಸಂಘಟನೆ ಮಾಡಲು ಅರ್ಹರಾಗಿರುವ ಸಮುದಾಯದ ಹಿರಿಯ ನಾಯಕರಾದ ಹೆಚ್.ಎಂ. ರೇವಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ಜಿಲ್ಲೆಯವರಾದ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿರುವುದು ನಮಗೆಲ್ಲ ಹೆಮ್ಮೆಯಾಗಿದೆ. ಡಿಕೆಶಿ ಅವರು ಸಿದ್ದರಾಮಯ್ಯ ಅವರ ಮಾರ್ಗದರ್ಶನ ಪಡೆದು ಶಾಶ್ವತ ಯೋಜನೆಗಳನ್ನು ನೀಡಿ ಉತ್ತಮ ಆಡಳಿತ ಕೊಡಲಿ ಎಂದು ಅವರು ಶುಭ ಕೋರಿದರು.

ತಾಲೂಕು ಕುರುಬ ಸಂಘದ ಅಧ್ಯಕ್ಷರಾದ ಹೆಚ್.ಬಿ. ರಾಮಣ್ಣ, ಸಂಘದ ನಿರ್ದೇಶಕ ಟಾಯ್ಸ್ ವೆಂಕಟೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ನವಲೇಶ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಕುರುಬ ಸಂಘದ ನಿರ್ದೇಶಕರುಗಳಾದ ಮಾದೇಶ್, ಶಿವಬೀರಯ್ಯ, ಹುಚ್ಚಯ್ಯನದೊಡ್ಡಿ ಶಿವಣ್ಣ, ಉಮೇಶ್, ಶ್ರೀನಿವಾಸ್, ರೇವಣ್ಣ, ಅಮ್ಮಳ್ಳಿದೊಡ್ಡಿ ಶಿವಲಿಂಗಯ್ಯ, ಜಯಲಕ್ಷ್ಮಿ, ಶಿವಲಿಂಗಪ್ಪ, ಸಂಕಲಗೆರೆ ದೊಡ್ಡಹುಚ್ಚಯ್ಯ, ರವಿ ಇತರರು ಇದ್ದರು.



### ವಿಪಕ್ಷಗಳ ಟೀಕೆಗೆ ಆಹಾರವಾಗದೆ ಸಿದ್ದು ರಾಜೀನಾಮೆ

ತಾಲೂಕು ಕುರುಬ ಸಂಘದ ಗೌರವಾಧ್ಯಕ್ಷ ಹಾಗೂ ಎಪಿಎಂಸಿ ಮಾಜಿ ಉಪಾಧ್ಯಕ್ಷ ಕೆ.ಬಿ. ಬೀರಯ್ಯ ಮಾತನಾಡಿ, ಕುರುಬ ಸಮುದಾಯದ ಕಳಶವಾದ ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನೀಡಿದ್ದರೂ ಇಂದು ರಾಜೀನಾಮೆ ನೀಡಿದ್ದಾರೆ ಎಂದರೆ ಅದಕ್ಕೆ ಹೈಕಮಾಂಡ್ ಮೇಲಿನ ಗೌರವ ಕಾರಣ. ಈ ನಿಟ್ಟಿನಲ್ಲಿ ವಿಪಕ್ಷಗಳಿಗೆ ರಾಜಕೀಯ ಆಹಾರವಾಗದಂತೆ ನುಡಿದಂತೆ ನಡೆದು ರಾಜೀನಾಮೆ ನೀಡಿರುವ ಸಿದ್ದರಾಯಮ್ಮ ಅವರನ್ನು ಉನ್ನತ ಸ್ಥಾನ ನೀಡಿ ಉಳಿಸಿಕೊಳ್ಳುವ ಜೊತೆಗೆ ಅವರ ಮಗ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಡಿಸಿಎಂ ಸ್ಥಾನ ನೀಡಬೇಕು ಜೊತೆಗೆ ಸಮುದಾಯದ ಮತ್ತೋರ್ವ ಹಿರಿಯ ನಾಯಕರಾದ ಹೆಚ್.ಎಂ. ರೇವಣ್ಣಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

### ಯತೀದ್ರರನ್ನು ಡಿಸಿಎಂ ಮಾಡಲು ನವಲೇಶ್ ಆಗ್ರಹ

ಸಂಘದ ಮಾಜಿ ಅಧ್ಯಕ್ಷ ನವಲೇಶ್ ಮಾತನಾಡಿ, ಯಾವುದೇ ಕಳಂಕ ಇಲ್ಲದೆ ಉತ್ತಮ ಆಡಳಿತ ನೀಡಿರುವ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗೆ ಇಳಿಸಿರುವುದು ನಮ್ಮ ಕುರುಬ ಸಮುದಾಯಕ್ಕೆ ತುಂಬಲಾರದ ನೋವುಂಟು ಮಾಡಿದೆ. ನುಡಿದಂತೆ ನಡೆದಿರುವ ಅವರ ಮಗ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಡಿಸಿಎಂ ಮಾಡಿ ಗೌರವದಿಂದ ಕಾಣದಿದ್ದರೆ ಕಾಂಗ್ರೆಸ್ ಪಕ್ಷ ಮುಂದಿನ ದಿನದಲ್ಲಿ ಕುರುಬ ಸಮುದಾಯದ ಕೋಪಕ್ಕೆ ಗುರಿಯಾಗುತ್ತದೆ ಎಂದು ಎಚ್ಚರಿಸಿದರು.

## ಗಣೇಶ ಪ್ರಸಾದ್ ಸಚಿವರಾಗಲಿ

ಗುಂಡ್ಲುಪೇಟೆ:- ಚಾಮರಾಜನಗರ-ಮೈಸೂರು ಬಾಗದಲ್ಲಿ ವೀರಶೈವ ಲಿಂಗಾಯತ ಸಮಾಜದ ಏಕೈಕ ಶಾಸಕರಾದ ಎಚ್ ಎಂ ಗಣೇಶ ಪ್ರಸಾದ್ ರವರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ದೇವರಹಳ್ಳಿ. ಪ್ರಕಾಶ್ ಅರ್ ಹೈಕಮಾಂಡ್ ಗೆ ಒತ್ತಾಯಿಸಿದ್ದಾರೆ



ಹಳೇ ಮೈಸೂರು ಭಾಗದಲ್ಲಿ ವೀರಶೈವ ಲಿಂಗಾಯತ ಮತ್ತು ಇತರೇ ಸಮುದಾಯದ ಮತಗಳು ನಿರ್ಣಾಯಕವಾಗಿದೆ ಇವುಗಳನ್ನು ಮತ್ತಷ್ಟು ಗಟ್ಟಿಗೂಳಿಸಲು ಮೊದಲು ಬಾರಿಗೆ 36 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾದಿಸಿ ಶಾಸಕರಾಗಿ ಅಯ್ಕೆಯಾದ ಎಚ್ ಎಂ ಗಣೇಶ್ ಪ್ರಸಾದ್ ರಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಪಕ್ಷಕ್ಕೆ ಮತ್ತಷ್ಟು ಬಲ ಬರಲಿದೆ ಜೊತೆಗೆ ಅವರ ತಂದೆ ದಿ. ಮಹದೇವ್ ಪ್ರಸಾದ್ ಚಾಮರಾಜನಗರ ಜಿಲ್ಲೆಯನ್ನು ಹೆಚ್ಚಿನ ಅಭಿವೃದ್ಧಿ ಪಡಿಸಿದ್ದಾರೆ ಅವರ ಹಾದಿಯಲ್ಲಿ ಮಗ ಕೂಡ ಹೆಜ್ಜೆಯಿಡಲು ಸಚಿವ ಸ್ಥಾನ ಪೂರಕ ವೇದಿಕೆಯಾ ಗಲಿದೆ ಅದ್ದರಿಂದ ಡಿಕೆಶಿ ನೇತೃತ್ವದ ಸರ್ಕಾರದಲ್ಲಿ ಮಂತ್ರಿ ಮಾಡಬೇಕೆಂದು ಮನವಿ ಮಾಡಿದರು ಶಾಸಕ ಗಣೇಶ ಪ್ರಸಾದ್ ರವರಿಗೆ ಸಚಿವ ಸ್ಥಾನ ನೀಡಿದರೆ ಮುಂಬರುವ ಜಿಪಂ.ತಾಪಂ. ಗ್ರಾಮ ಪಂ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಪರವಾಗಿ ಹಳೇ ಮೈಸೂರು ಭಾಗದಲ್ಲಿಪೂರಕ ವಾತವರಣ ನಿರ್ಮಾಣವಾಗಲಿದೆ ಎಂದರು

## ಸತೀಶ್ ಜಾರಕಿಹೊಳಿಗೆ ಡಿಸಿಎಂ, ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ನೀಡಿ

ಚಾಮರಾಜನಗರ:ಸತೀಶ್ ಜಾರಕಿಹೊಳಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಮತ್ತು ಡಿಸಿಎಂ ಸ್ಥಾನ ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಮತ್ತು ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡುವಂತೆ ಮತ್ತು ಜಿ.ಪಂ.ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು ಅವರನ್ನು ಎಂಎಲ್‌ಸಿ ಮಾಡುವಂತೆ ವಾಲ್ಮೀಕಿ ನಾಯಕ ಸಮುದಾಯದ ಪರವಾಗಿ ಜಿ.ಪಂ.ಮಾಜಿ ಸದಸ್ಯ ಎಸ್.ಸೋಮನಾಯಕ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.ನಾಯಕ ಸಮುದಾಯ ಪ್ರಭಾವಿ ನಾಯಕರು, ಸರಳ ಸಜ್ಜನಿಕೆ ರಾಜಕಾರಣಿ, ಸಂಘಟನೆಯ ಚತುರ, ಎಲ್ಲ ವರ್ಗದ ಸಮುದಾಯದವರು ಇಷ್ಟಪಡುವ ಧೀಮಂತ ನಾಯಕರು, ಸಚಿವರಾದ ಸತೀಶ್ ಜಾರಕಿಹೊಳಿ ಅವರು ನಿಷ್ಠಾವಂತ, ಪ್ರಾಮಾಣಿಕರಾಗಿ ಸೇವೆ ಸಲ್ಲಿಸಿಕೊಂಡು ಬಂದಿದ್ದಾರೆ. ಅವರನ್ನು ಕೆಪಿಸಿಸಿ ಅಧ್ಯಕ್ಷರಾಗಿ, ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ ಕಾಂಗ್ರೆಸ್ ದೊಡ್ಡಮಟ್ಟದಲ್ಲಿ ಸಂಘಟನೆ ಆಗುತ್ತದೆ. ಮುಂದಿನ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದು ಅಧಿಕಾರ ಬರುವ ಎಲ್ಲ ರೀತಿಯ ಶಕ್ತಿ ಅವರಲ್ಲಿದೆ ಎಂದರು.



ಉಪ್ಪಾರ ಸಮುದಾಯದ ಏಕೈಕ ಶಾಸಕರು, ಮತದಾರರಿಗೆ ನಿತ್ಯವೂ ಸ್ಥಳೀಯವಾಗಿ ಸಿಗುವಂತಹ ಬಡವರ ಬಂಧು, ನಿಷ್ಠವಂತ, ಜಾತ್ಯಾತೀತ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರ ಅನುಭವ, ಹಿರಿತನ ಪರಿಗಣಿಸಿ ಅವರನ್ನು ಸಚಿವರಾಗಿ ಮಾಡಬೇಕು. ಅಲ್ಲದೆ ನಾಯಕ ಸಮುದಾಯದ ದಿವಂಗತ ಚಿಕ್ಕ ಮಾಧು ಅವರ ಪುತ್ರರಾದ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾಧು ಅವರನ್ನು ಸಚಿವರನ್ನಾಗಿ ಮಾಡಬೇಕು ಇದಲ್ಲದೆ ಜಿ.ಪಂ. ಮಾಜಿ ಅಧ್ಯಕ್ಷರಾಗಿ, ವಾಲ್ಮೀಕಿ ನಿಗಮ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಕಾಂಗ್ರೆಸ್ ಮುಖಂಡ ಎಸ್.ಸಿ.ಬಸವರಾಜು ಅವರನ್ನು ವಿಧಾನಪರಿಷತ್ ಸದಸ್ಯರಾಗಿ ಮಾಡುವಂತೆ ಕಾಂಗ್ರೆಸ್ ಕೇಂದ್ರ, ರಾಜ್ಯ ವರಿಷ್ಠರಲ್ಲಿ ಎಸ್.ಸೋಮನಾಯಕ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಎಸ್ ಟಿ ವಿಭಾಗದ ಮಾಜಿ ಜಿಲ್ಲಾಧ್ಯಕ್ಷ ಪಾಳ್ಯ ಕೃಷ್ಣನಾಯಕ, ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯ ಅಮಚವಾಡಿ ರಾಜು, ಮುಖಂಡರಾದ ರಂಗಸ್ವಾಮಿ ಯಾನಗಹಳ್ಳಿ, ಹೆಚ್.ಎಂ.ಶಿವಣ್ಣ ಹಾಜರಿದ್ದರು.

## ಸಿ.ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ



ಚಾಮರಾಜನಗರ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ, ವಿಧಾನ ಪರಿಷತ್ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಉಮೇಶ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪುಟ್ಟರಂಗಶೆಟ್ಟಿ ಅವರು ರಾಜ್ಯದ ಉಪ್ಪಾರ ಜನಾಂಗದ ಏಕೈಕ ಶಾಸಕರು. ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದಾರೆ. ಉಪ್ಪಾರ ಸಮಾಜ ಮತದಾರರು ಹೆಚ್ಚು ಇರುವ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಜಾಗೃತಿ ಮೂಡಿಸಿದ್ದಾರೆ. 2008ರಿಂದ ನಿರಂತರ ಆಯ್ಕೆಯಾಗಿದ್ದಾರೆ. ಜಿಲ್ಲಾ ಕೇಂದ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಕಾಂಗ್ರೆಸ್ ಪಕ್ಷದಿಂದಲ್ಲೇ ರಾಜಕೀಯ ಆರಂಭಿಸಿದರು. ಅಧಿಕಾರ ಇರಲಿ, ಇಲ್ಲದಿದ್ದ ಸಂದರ್ಭದಲ್ಲೂ ಕಾಂಗ್ರೆಸ್ ಬಿಟ್ಟು ಹೋಗಿಲ್ಲ. ಅವರಿಗೆ ಬೇರೆ ಪಕ್ಷಗಳಿಂದಲ್ಲೂ ಅಫರ್ ಬಂದರು ಕೂಡ ಪಕ್ಷಾಂತರ ಮಾಡದೆ ಕಾಂಗ್ರೆಸ್ ನಲ್ಲಿ ನಿಷ್ಠಾವಂತರಾಗಿ ಪಕ್ಷ ಬೆಳೆಸಿದ್ದಾರೆ ಎಂದರು. ಮುಂದಿನ ಸಚಿವ ಸಂಪುಟದಲ್ಲಿ ವಿಧಾನ ಪರಿಷತ್ ಸದಸ್ಯರು, ಯವಕರ ಆಶಾಕಿರಣ ಯತೀಂದ್ರ ಸಿದ್ದರಾಮಯ್ಯ ಅವರನ್ನು ಉಪಮುಖ್ಯಮಂತ್ರಿ ಯಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಕುರುಬರ ಸಂಘದ ಜಿಲ್ಲಾ ಉಪಾಧ್ಯಕ್ಷ ಬಸಪ್ಪನಪಾಳ್ಯ ನಟರಾಜು, ಸಹ ಕಾರ್ಯದರ್ಶಿ ಮಹಾದೇವಸ್ವಾಮಿ, ತಾಲೂಕು ಸಂಘಟನಾ ಕಾರ್ಯದರ್ಶಿ ಗೋವಿಂದ, ಮಂಜು, ನಿರ್ದೇಶಕರಾದ ಶಿವಸ್ವಾಮಿ, ಮರಿಸ್ವಾಮಿ, ರಾಜುಕೆಲ್ಲಂಬಳ್ಳಿ, ಸುಬ್ಬೇಗೌಡ ಇದ್ದರು.

### ಚಾಮರಾಜನಗರ ತಾಲ್ಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಹೇಳಿಕೆ

## ಪಂಚಗ್ಯಾರಂಟಿಗಳನ್ನು, ಸಮರ್ಪಕವಾಗಿ ತಲುಪಿಸಿ

ಚಾಮರಾಜನಗರ: ರಾಜ್ಯಸರ್ಕಾರ ಜಾರಿಮಾಡಿರುವ ಪಂಚಗ್ಯಾರಂಟಿಗಳನ್ನು ಸಂಬಂಧಪಟ್ಟ ಇಲಾಖಾಧಿಕಾರಿಗಳು ಗೊಂದಲಕ್ಕೆ ಎಡೆಮಾಡಿಕೊಡದಂತೆ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಚಾಮ ರಾಜನಗರ ತಾಲ್ಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಸೋಮೇಶ್ವರ್ ಹೇಳಿದರು.

ನಗರದ ತಾಪಂ ಕಚೇರಿಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆ ಕುರಿತ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಭೆಯ ಆರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆ, ಆಹಾರಇಲಾಖೆ, ಸೆಸ್ಕ್, ಸಾರಿಗೆ, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಶಕ್ತಿ, ಗೃಹ ಜ್ಯೋತಿ, ಅನ್ನಭಾಗ್ಯ, ಯುವನಿಧಿ ಕಳೆದ 3ವರ್ಷದಲ್ಲಿ ಅನುಷ್ಠಾನದ ಕುರಿತು ಮಾಹಿತಿ ಪಡೆದರು. ಅನ್ನಭಾಗ್ಯ ಯೋಜನೆಯಡಿ ಮೇ-ಜೂನ್ ಮಾಹೆಯಲ್ಲಿ ಎಎವೈಅಕ್ಕಿ- 3260, ಬಿಪಿಎಲ್-10.352, ಎಎವೈರಾಗಿ-4890, ಬಿಪಿಎಲ್ ರಾಗಿ- 15,528 ಕ್ವಿಂಟಾಲ್ ರಾಗಿ 1.58,718 ಲೀಟರ್ಸೀಮೆಎಣ್ಣೆ ವಿತರಿಸಲಾಗಿದೆ.



ಗೃಹಲಕ್ಷ್ಮೀ ಯೋಜನೆಯಡಿ 2023ರಿಂದ ಏ.20 26ರವರಗೆ ಮಹಿಳೆಯರಿಗೆ 554 ಕೋಟಿ ರೂ.ಪಾವತಿಸಲಾಗಿದೆ ಎಂದರು. ಗೃಹಜ್ಯೋತಿ ಯೋಜನೆಯಡಿ. ಚಾಮರಾಜನಗರ ತಾಲೂಕಿನಲ್ಲಿ 101539 ಗ್ರಾಹಕರಿದ್ದು, 2023 ಆಗಸ್ಟ್‌ನಿಂದ 2026 ರವರಗೆ 1.0197 ಕೋಟಿ ರೂ. ಪಾವತಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಕಳೆದ ಮೂರುವರ್ಷದಲ್ಲಿ 4,59,727 ಮಂದಿ ಪ್ರಯಾಣ ಮಾಡಿದ್ದು, 177,25, 33,690 ಕೋಟಿ ರೂ.ಆದಾಯ ಬಂದಿದೆ ಎಂದರು. 2026 ಮೇ.ಅಂತ್ಯಕ್ಕೆ 2041 ಅಭ್ಯರ್ಥಿಗಳು ನೋಂದಣ ಯಾಗಿದ್ದು, ಡಿಪ್ಲೋಮಾ ಅಭ್ಯರ್ಥಿಗಳಿಗೆ 4.38ಲಕ್ಷ, ಪದವೀಧರರಿಗೆ 4,87,29ಲಕ್ಷ ರೂ.ಗಳನ್ನು ನೇರಪಾವತಿ ಮೂಲಕ ವರ್ಗಾವಣೆ ಮಾಡಲಾಗಿದೆ ಎಂದರು. ಪಡಿತರ ವಿತರಣೆಗೆ ಸರ್ವರ್ ಸಮಸ್ಯೆಯಾಗಿದ್ದು, ಪಡಿತರದಾರರು ಬೆಳಗಿನಿಂದ ಸಂಜೆವರೆಗೂ ನಿಂತು ಪಡಿತರ ಪಡೆಯಬೇಕಿದೆ. ಸಂಬಂಧಪಟ್ಟ ಆಹಾರಇಲಾಖೆ ಅಧಿಕಾರಿಗಳು ಬಯೋಮೆಟ್ರಿಕ್ ಬದಲಿಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರದ ಗಮನಸೆಳೆಯಬೇಕು ಎಂದು ಸೂಚಿಸಿದರು.

ಚಾಮರಾಜನಗರ ತಾಲ್ಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಮರಿಯಾಲದಹುಂಡಿ ಕುಮಾರ್, ಮಲ್ಲಿಕಾರ್ಜುನ್, ರಾಜು, ಮಂಜುಳಾ, ಕುಮಾರಸ್ವಾಮಿ, ರಮೇಶ್, ಚೆನ್ನಸ್ವಾಮಿ, ರಂಗಸ್ವಾಮಿ, ರಾಜೇಶ್, ಸುಕುಮಾರ್, ತಾಪಂ ಯೋಜನಾಧಿಕಾರಿ ಕಿರಣ್‌ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆ, ಆಹಾರಇಲಾಖೆ, ಸೆಸ್ಕ್, ಸಾರಿಗೆ, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಚಲುವರಾಯಸ್ವಾಮಿ ಜನ್ಮದಿನ: ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

## ಸಾಧಕರಿಗೆ ಸನ್ಮಾನ, ಸೇವಾ ಕಾರ್ಯಕ್ರಮಗಳಿಗೆ ಮಂಡ್ಯದಲ್ಲಿ ಸಜ್ಜು




**ಮಂಡ್ಯ:** ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂಎನ್ ಚೆಲುವರಾಯಸ್ವಾಮಿ ಅಭಿಮಾನಿಗಳ ಬಳಗದ ಸಹಯೋಗದಲ್ಲಿ ಮಾಜಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ಜನ್ಮದಿನದ ಪ್ರಯುಕ್ತ ಜೂನ್ 1ರಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುಂಡಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭಕ್ಕೂ ಮುನ್ನ ಬೆಳಿಗ್ಗೆ 7.30ಕ್ಕೆ ನಗರದ ವಿದ್ಯಾಗಣಪತಿ ದೇವಸ್ಥಾನದಲ್ಲಿ ಚಲುವರಾಯಸ್ವಾಮಿ ಅವರ ಒಳಿತಿಗಾಗಿ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಮಧ್ಯಾಹ್ನ ಜಿಲ್ಲಾ ಆಸ್ಪತ್ರೆಯ ಮಮತೆಯ ಮಡಿಲು ಕೇಂದ್ರದಲ್ಲಿ ರೋಗಿಗಳಿಗೆ ಗಂಜಿ ವಿತರಣೆ, ಒಳರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಹಾಗೂ ಸೇವಾ ಕಿರಣ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಊಟ–ತಿಂಡಿ ವ್ಯವಸ್ಥೆ ಮಾಡಲಾಗಿದೆ ಎಂದರು.

ಜೂನ್ 1ರಂದು ಬೆಳಿಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸುಮಾರು 100 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮವನ್ನು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚ್ಚಿನ್ ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಅಧ್ಯಕ್ಷತೆ ವಹಿಸಲಿದ್ದಾರೆ. ನಿವೃತ್ತ ಪ್ರಾಂಶುಪಾಲ ಎಂ. ರಾಮಕೃಷ್ಣ ಕಾರ್ಯಕ್ರಮದ ಕುರಿತು ಮಾತನಾಡಲಿದ್ದಾರೆ.

ಶಿಕ್ಷಣ, ವೈದ್ಯಕೀಯ, ಜನಪದ ಹಾಗೂ ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರಸನ್ನಕುಮಾರ್ ಕೆರಗೋಡು, ಡಾ. ಮುರಳಿ ಮೋಹನ್ ಆರ್., ಉಮೇಶ್ ಶಿವಾರ, ಮಧುಕುಮಾರ್ ಕಾರೆಕಟ್ಟೆ ಹಾಗೂ ಉಪನ್ಯಾಸಕಿ ಡಾ. ದೇವಿಕಾ ಎನ್.ಎಸ್. ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಸಿ.ಎಂ. ದ್ಯಾವಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗಂಗಾಮತ ಸಮುದಾಯಕ್ಕೆ ವಿಧಾನಪರಿಷತ್ ಸ್ಥಾನಕ್ಕೆ ಒತ್ತಾಯ




**ಮಂಡ್ಯ:** ಗಂಗಾ ಮತ (ಬೆಸ್ತರ) ಸಮುದಾಯದ ಪ್ರಮುಖರಾದ ತಿಪ್ಪಣ್ಣ ಕಮಕನೂರು, ಮಂಜುನಾಥ ಸುಣಗಾರ ಹಾಗೂ ಡಾ. ಭಗತ್ ರಾಮ್ ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ಕಲ್ಪಿಸಬೇಕೆಂದು ಮಂಡ್ಯ ಜಿಲ್ಲಾ ಮಹಿಳಾ ಗಂಗಾಮತ (ಬೆಸ್ತರ) ಸಂಘದ ಅಧ್ಯಕ್ಷೆ ಸಿ. ಗಾಯತ್ರಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿ ವಿಧಾನಪರಿಷತ್ ಸದಸ್ಯರಾದ ತಿಪ್ಪಣ್ಣ ಕಮಕನೂರು ಅವರು ಉತ್ತಮ ಕೆಲಸಗಳನ್ನು ನಿರ್ವಹಿಸಿದ್ದು, ಅವರನ್ನು ಮುಂದುವರಿಸುವುದರ ಜೊತೆಗೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಕರ್ನಾಟಕ ರಾಜ್ಯ ಮೀನುಗಾರರ ಕಾಂಗ್ರೆಸ್ ವಿಭಾಗದ ರಾಜ್ಯಾಧ್ಯಕ್ಷ ಮಂಜುನಾಥ ಸುಣಗಾರ ಅವರು ಮೀನುಗಾರರ ಹಿತಕ್ಕಾಗಿ ಹಲವಾರು ಸೇವೆಗಳನ್ನು ಸಲ್ಲಿಸಿರುವುದರಿಂದ ಅವರಿಗೆ ವಿಧಾನಪರಿಷತ್ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ಜೊತೆಗೆ ಚನ್ನಪಟ್ಟಣದ ಮಾಜಿ ಶಾಸಕ ದಿವಂಗತ ಡಿ.ಟಿ.ರಾಮು ಅವರ ಪುತ್ರರಾದ ವೈದ್ಯರಾದ ಡಾ. ಭಗತ್ ರಾಮ್ ಅವರನ್ನು ಸಹ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕೆಂದು ಸರ್ಕಾರ ಹಾಗೂ ಕಾಂಗ್ರೆಸ್ ಮುಖಂಡರಿಗೆ ಮನವಿ ಮಾಡಿದರು.

# ಒಂದೇ ದಿನದಲ್ಲಿ 700 ಮೀ. ರಸ್ತೆ ನಿರ್ಮಾಣ

## ತಹಶೀಲ್ದಾರ್ ಸುರೇಂದ್ರಮೂರ್ತಿಗೆ ಗ್ರಾಮಸ್ಥರಿಂದ ಅಭಿನಂದನೆ




**ಕೆ.ಆರ್.ನಗರ:** ನೊಂದವರ ಪಾಲಿನ ದೇವರಾಗಿ ಮತ್ತು ಸರಳ ಸಜ್ಜನಿಕೆಯ

ಸಕಾರ ಮೂರ್ತಿಗಳಾದ ಕೆ. ಆರ್ .ನಗರದ ತಹಸೀಲ್ದಾರ್ ಸುರೇಂದ್ರಮೂರ್ತಿ ರವರಿಗೆ ದೊಡ್ಡಕೊಪ್ಪಲು ಗ್ರಾಮಸ್ಥರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ ಎಂದು ದೊಡ್ಡಕೊಪ್ಪಲು ಗ್ರಾಮದ ಬೀರೇಶ್ ಕೂನೇಗೌಡ ತಿಳಿಸಿದರು

ಪಟ್ಟಣದ ತಾಲ್ಲೋಕು ಕಛೇರಿಯಲ್ಲಿ ದೊಡ್ಡಕೊಪ್ಪಲು ಗ್ರಾಮದ ವತಿಯಿಂದ ತಹಸೀಲ್ದಾರ್ ರವರಿಗೆ ಸನ್ಮಾನ ಮಾಡಿ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು ನಮ್ಮ ಮನವಿಗೆ ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಕೆಲಸವನ್ನು ತಾವು ಒಂದೇ ದಿನದಲ್ಲಿ 700 ಮೀಟರ್ ರಸ್ತೆ ಮಾಡಿಸಿದ ಕೀರ್ತಿಗೆ ಪಾತ್ರರಾಗಿರುತ್ತೀರಿ ಮತ್ತು ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಅತಿ ಶೀಘ್ರವಾಗಿ ಕೆಲಸಗಳನ್ನು ಮಾಡಿಕೊಡುವ, ನೊಂದವರ ಪಾಲಿನ ದೇವರಾಗಿ ಮತ್ತು ಸರಳ ಸಜ್ಜನಿಕೆಯ ಸಕಾರಮೂರ್ತಿಗಳಾದ ತಮಗೆ ದೊಡ್ಡಕೊಪ್ಪಲು ಗ್ರಾಮಸ್ಥರ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ ಎಂದರು.

ನೊಂದ ರೈತರಿಗೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ ಮತ್ತು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಕೋನವನ್ನು ಇಟ್ಟುಕೊಂಡು, ಅತ್ಯಂತ ಅಲ್ಪ ಅವಧಿಯಲ್ಲಿ ದೊಡ್ಡಕೊಪ್ಪಲು ಗ್ರಾಮದಲ್ಲಿ ಬರುವ, ಉತ್ತರದಿಂದ ದಕ್ಷಿಣಕ್ಕೆ ಹಾದು ಹೋಗುವ ರಸ್ತೆಯನ್ನು, ಸರ್ವೆ ಸ್ಕೆಚ್‌ನಲ್ಲಿ ಇದ್ದಂತೆ ನಿರ್ಮಿಸಿಕೊಡಲು ಕಂದಾಯ ನಿರೀಕ್ಷಕರಾದ ಪ್ರಕಾಶ್ ರವರನ್ನು ಗ್ರಾಮ ಲೆಕ್ಕಿಗರಾದ ಜಮಖಂಡಿಯವರನ್ನು, ಸರ್ವೆ ನೌಕರರಾದ ಕುಮಾರಸ್ವಾಮಿಯವರನ್ನು ಹಾಗೂ ಗ್ರಾಮ ಸಹಾಯಕರಾದ ದರ್ಶನ್ ಜಿ.ಎಸ್. ರವರನ್ನು ಸ್ಥಳಕ್ಕೆ ಕಳುಹಿಸಿಕೊಟ್ಟು, ಸರ್ಕಾರಿ ಓಣಿಯನ್ನು ಅಳತೆ ಮಾಡಿ, ಸುಮಾರು 20 ಅಡಿಗಳ ರಸ್ತೆಯನ್ನು ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ, ಒಂದೇ ದಿನದಲ್ಲಿ ಸುಮಾರು 700 ಮೀಟರ್ ರಸ್ತೆ ನಿರ್ಮಾಣ ಮಾಡಿಸಿದ ಕೀರ್ತಿ ತಮಗೆ ಸಲ್ಲುತ್ತದೆ. ದೊಡ್ಡ ಕೊಪ್ಪಲು ಗ್ರಾಮಸ್ಥರು ನಿಮಗೆ ಚಿರಋಣಿಯಾಗಿರುತ್ತೇವೆ ಎಂದರು.

ತಹಸೀಲ್ದಾರ್ ಸುರೇಂದ್ರಮೂರ್ತಿರವರು ಮಾತನಾಡಿ ನಾವು ಇರುವುದೇ ಜನರ ಸೇವೆ ಮಾಡಲು ತಾಲ್ಲೂಕಿನ ಜನಸಾಮಾನ್ಯರು ತಮ್ಮ ಯಾವುದೇ ಸಮಸ್ಯೆಗಳು ಇದ್ದರೂ ಕೂಡ ಯಾವುದೇ ಸಮಯದಲ್ಲಾದರೂ ನಮಗೆ ಕರೆ ಮಾಡಿದರೆ ನಾವು ನಮ್ಮ ಕೈಲಾದ ಸಹಾಯವನ್ನು ಮಾಡುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಈ ರಸ್ತೆಯನ್ನು ಮಾಡಿಕೊಂಡಿ ಎಂದು ತಮ್ಮ ಗ್ರಾಮದ ವತಿಯಿಂದ ನನಗೆ ಮನವಿ ಬಂದ ತಕ್ಷಣ ಕಾನೂನು ರೀತಿಯಲ್ಲಿ ಏನು ಕ್ರಮ ಕೈಕೊಳ್ಳಬೇಕು ಅದನ್ನು ಮಾಡಿದ್ದೇವೆ ಅಷ್ಟೇ ಎಂದರು.

ಈ ಸಂದರ್ಭದಲ್ಲಿ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ದೇವರಮನೆ ಮನೆತನದ ವಂಶಪರಂಪರ್ಯ ಗಣಾಚಾರಿಗಳಾದ ಬೀರೇಶ್ ಕೂನೇಗೌಡ, ನಿವೃತ್ತ ಮುಖ್ಯಶಿಕ್ಷಕರಾದ ಡಿ.ಟಿ.ರಮೇಶ್, ಪೂಜಾರಿ ಆನಂದ್, ಮಾಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಡಿ.ಟಿ.ಮಹೇಶ್ ಹಾಗೂ ನಿವೃತ್ತ ದೈಹಿಕ ಶಿಕ್ಷಕರಾದ ಡಿ.ಎಸ್.ಗೋವಿಂದೇಗೌಡ, ಸಣ್ಣ ಕರೀಗೌಡರ ಪುಟ್ಟೇಗೌಡ, ನಿವೃತ್ತ ಹಿರಿಯ ಪಶುಪಾಲನಾ ಅಧಿಕಾರಿಗಳಾದ ಡಿ.ಕೆ ಕೃಷ್ಣಗೌಡ, ಶಿವಗ್ಗೇಗೌಡ, ಡಿ.ಆರ್ ಪ್ರವೀಣ್ ಕುಮಾರ್, ಶ್ರೀಮತಿ ರತ್ನಮ್ಮ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಸಚಿವ ಸ್ಥಾನಕ್ಕಾಗಿ ನಾನು ಆಕಾಂಕ್ಷಿ ಅಲ್ಲ: ಶಾಸಕ ಉದಯ್

## ಕ್ಷೇತ್ರದ ಅಭಿವೃದ್ಧಿಯೇ ಮೊದಲ ಆದ್ಯತೆ | ನೀರಾವರಿ, ಮೂಲಸೌಕರ್ಯಕ್ಕೆ ಹೆಚ್ಚಿನ ಒತ್ತು



**ಕೆ.ಎಂ.ದೊಡ್ಡಿ:** ಸಚಿವ ಸ್ಥಾನಕ್ಕಾಗಿ ನಾನು ಆಕಾಂಕ್ಷಿ ಅಲ್ಲ, ಆ ರೀತಿಯ ಯಾವುದೇ ಸ್ಪರ್ಧೆಯಲ್ಲೂ ನಾನು ಇಲ್ಲ ಎಂದು ಶಾಸಕ ಉದಯ್ ಸ್ಪಷ್ಟಪಡಿಸಿದರು.

ಸಮೀಪದ ಚಂದಾಪುರ ಗ್ರಾಮದ ಬಳಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಸುಮಾರು 6 ಕೋಟಿ ರೂ. ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರು ನನ್ನ ಮೇಲೆ ವಿಶ್ವಾಸವಿಟ್ಟು ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ಆದ್ದರಿಂದ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವುದು ನನ್ನ ಮುಖ್ಯ ಕರ್ತವ್ಯ ಎಂದು ಹೇಳಿದರು.

ಪಕ್ಷದಲ್ಲಿ ಹಿರಿಯ ಶಾಸಕರು ಹಾಗೂ ಅರ್ಹರು ಸಾಕಷ್ಟು ಮಂದಿ ಇದ್ದು, ಮೊದಲಿಗೆ ಅವರಿಗೆ ಸಚಿವ ಸ್ಥಾನ ನೀಡಬೇಕು. ನನಗೆ ಯಾವುದೇ ಹುದ್ದೆಗಾಗಿ ಬೇಡಿಕೆ ಇಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು. ಇನ್ನೂ ಮುಂದಿನ ಎರಡು ವರ್ಷಗಳಲ್ಲಿ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ವಿಶೇಷವಾಗಿ ರೈತರ ಪ್ರಮುಖ ಸಮಸ್ಯೆಯಾಗಿರುವ ನೀರಾವರಿ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಕೆರೆಗಳು, ಕಾಲುವೆಗಳ ಅಭಿವೃದ್ಧಿಗೆ ಸುಮಾರು 800 ಕೋಟಿ ರೂ. ಅನುದಾನದಲ್ಲಿ ಹಂತ ಹಂತವಾಗಿ ಕಾಮಗಾರಿಗಳು ನಡೆಯಲಿವೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ತನ್ನ ಮೊದಲ ಆದ್ಯತೆ ಎಂದು ತಿಳಿಸಿದರು. ರಾಜ್ಯದಲ್ಲಿ ಹೊಸ ಸರ್ಕಾರ ಸ್ಥಾಪನೆಯಾದ ಹಿನ್ನೆಲೆ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಅನುದಾನ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

**ಮಂಡ್ಯ ಡಯಟ್ ನ ಹಿರಿಯ ಉಪನ್ಯಾಸಕರಾದ ಪ್ರಶಾಂತ್ ರವರು ಇಂದು ವಯೋನಿವೃತ್ತಿಗೊಂಡ ಸಂದರ್ಭದಲ್ಲಿ ಮಂಡ್ಯ ತಾಲ್ಲೂಕು ದಕ್ಷಿಣ ವಲಯದ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ಶಿವಣ್ಣಮಂಗಲ ಗೌರವಿಸಿದರು, ಸಂಘದ ಸಹಕಾರ್ಯದರ್ಶಿ ಡಿ. ಕೆ. ಜಗದೀಶ್, ಪ್ರಾಂಶುಪಾಲರಾದ ಯೋಗೇಶ್, ದೈಹಿಕ ಶಿಕ್ಷಣ ಶಿಕ್ಷಕ ರವಿಚಂದ್ರ ಮತ್ತಿತರರು ಇದ್ದರು.**



# ವಿಶ್ವ ಪೋಷಕರ ದಿನ



ಪ್ರತಿ ವರ್ಷ ಜೂನ್ 1 ರಂದು ಜಗತ್ತಿನಾದ್ಯಂತ ವಿಶ್ವ ಪೋಷಕರ ದಿನ ವನ್ನು (Global Day of Parents) ಆಚರಿಸಲಾಗುತ್ತದೆ. ಮಕ್ಕಳ ಉನ್ನತಿಗಾಗಿ ತಮ್ಮ ಇಡೀ ಜೀವಿತಾವಧಿಯ ತನು–ಮನ–ಧನವನ್ನು ತ್ಯಾಗ ಮಾಡುವ ಪೋಷಕರ ನಿಸ್ವಾರ್ಥ ಸೇವೆಯನ್ನು ಗೌರವಿಸಲು ವಿಶ್ವಸಂಸ್ಥೆಯು 2012 ರಲ್ಲಿ ಈ ದಿನವನ್ನು ಅಧಿಕೃತವಾಗಿ ಘೋಷಿಸಿತು. ಜಾಗತಿಕ ಮಟ್ಟದಲ್ಲಿ ಈ ದಿನವು ಕೇವಲ ಒಂದು ಔಪಚಾರಿಕ ಆಚರಣೆಯಾಗಿ ಉಳಿಯದೆ, ನಾಗರಿಕ ಸಮಾಜದ ಮೂಲ ಘಟಕವಾದ ಕುಟುಂಬ ದ ಮೌಲ್ಯಗಳನ್ನು ಗಟ್ಟಿಗೊಳಿಸುವ ಮತ್ತು ತೀವ್ರವಾಗಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ ನಮ್ಮ ಹೆತ್ತವರ ಸ್ಥಿತಿಗತಿಗಳನ್ನು ಅವಲೋಕಿಸುವ ಆತ್ಮಾವಲೋಕನದ ದಿನವಾಗಿದೆ.

**ಜಾಗತಿಕ ಪರಂಪರೆ:** ಆಚರಣೆಯ ವಿವಿಧ ಮುಖಗಳು ವಿಶ್ವಸಂಸ್ಥೆಯು ಜೂನ್ 1 ಅನ್ನು ಪೋಷಕರ ದಿನ ಎಂದು ಘೋಷಿಸುವ ದಶಕಗಳ ಮೊದಲೇ ಜಗತ್ತಿನ ವಿವಿಧ ದೇಶಗಳು ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಇತಿಹಾಸದೊಂದಿಗೆ ಈ ದಿನವನ್ನು ಆಚರಿಸಿಕೊಂಡು ಬಂದಿವೆ.

ದಕ್ಷಿಣ ಕೊರಿಯಾದಲ್ಲಿ 1973 ರಿಂದಲೇ ಮೇ 8 ಅನ್ನು ಪೋಷಕರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಅಲ್ಲಿ ಮಕ್ಕಳು ತಮ್ಮ ಹೆತ್ತವರಿಗೆ ಅತ್ಯಂತ ಗೌರವದಿಂದ ಕಾರ್ನೇಷನ್ (Carnation) ಹೂವುಗಳನ್ನು ಉಡುಗೊರೆಯಾಗಿ ನೀಡಿ ಕೃತಜ್ಞತೆ ಸಲ್ಲಿಸುವ ವಿಶಿಷ್ಟ ಸಂಪ್ರದಾಯವಿದೆ.

ಇನ್ನು ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ದೇಶದಲ್ಲಿ ಆಗಸ್ಟ್ 1 ರಂದು ಈ ದಿನವನ್ನು ಆಚರಿಸಲಾಗುತ್ತದೆ. ಅಂದು ಮುಂಜಾನೆ ಜನರು ಮೊದಲು ಸ್ಮಶಾನಗಳಿಗೆ ತೆರಳಿ ಮರಣ ಹೊಂದಿದ ತಮ್ಮ ಹಿರಿಯರ ಸಮಾಧಿಗಳನ್ನು ಸ್ವಚ್ಛಗೊಳಿಸಿ ಪೂಜಿಸುತ್ತಾರೆ; ಆ ನಂತರವಷ್ಟೇ ಬದುಕಿರುವ ಹೆತ್ತವರ ಆಶೀರ್ವಾದ ಪಡೆಯುತ್ತಾರೆ.

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಜುಲೈ ತಿಂಗಳ ನಾಲ್ಕನೇ ಭಾನುವಾರವನ್ನು ಪೋಷಕರ ದಿನವನ್ನಾಗಿ ಆಚರಿಸುವ ಕಾನೂನಿಗೆ 1994 ರಲ್ಲಿ ಅಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್ ಸಹಿ ಹಾಕಿದ್ದರು. ಈ ಎಲ್ಲಾ ವೈವಿಧ್ಯಮಯ ಆಚರಣೆಗಳ ಹಿಂದಿರುವ ಏಕೈಕ ಆಶಯ ಹೆತ್ತವರ ಅಪಾರ ತ್ಯಾಗಕ್ಕೆ ಕೃತಜ್ಞತೆ ಸಲ್ಲಿಸುವುದು.

ಬದಲಾವಣೆಯಾದ ಭಾರತೀಯ ಕೌಟುಂಬಿಕ ವ್ಯವಸ್ಥೆ

ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪೋಷಕರನ್ನು ಮಾತೃದೇವೋಭವ, ಪಿತೃದೇವೋಭವ ಎಂದು ದೈವಿಕ ಸ್ಥಾನದಲ್ಲಿ ನಿಲ್ಲಿಸಲಾಗಿದೆ. ನಮ್ಮ ದೇಶದಲ್ಲಿ ಪೋಷಕತ್ವ ಎನ್ನುವುದು ಕೇವಲ 18 ವರ್ಷಗಳ ಕಾನೂನಾತ್ಮಕ ಜವಾಬ್ದಾರಿಯಲ್ಲ; ಅದು ಜೀವಿತಾವಧಿಯ ಭಾವನಾತ್ಮಕ ಬದ್ಧತೆ. ಆದರೆ, ಇತ್ತೀಚಿನ ದಶಕಗಳಲ್ಲಿ ತಂತ್ರಜ್ಞಾನ, ಜಾಗತೀಕರಣ ಮತ್ತು ಆಧುನಿಕ ಜೀವನಶೈಲಿಯ ಪ್ರಭಾವದಿಂದಾಗಿ ನಮ್ಮ ಕೌಟುಂಬಿಕ ವ್ಯವಸ್ಥೆ ತೀವ್ರ ಬದಲಾವಣೆಗೆ ಒಳಗಾಗುತ್ತಿದೆ.

ಒಂದು ಕಾಲದಲ್ಲಿ ಭಾರತದ ಹೆಮ್ಮೆಯಾಗಿದ್ದ ಅವಿಭಕ್ತ ಕುಟುಂಬಗಳು ಇಂದು ವೇಗವಾಗಿ ವಿಭಕ್ತ (ನ್ಯೂಕ್ಲಿಯರ್) ಕುಟುಂಬಗಳಾಗಿ ಮಾರ್ಪಡುತ್ತಿವೆ. ಉದ್ಯೋಗದ ಅನಿವಾರ್ಯತೆ ಅಥವಾ ವೈಯಕ್ತಿಕ ಸ್ವಾತಂತ್ರ್ಯದ ಹಂಬಲದಿಂದಾಗಿ ಯುವ ಪೀಳಿಗೆ ನಗರಗಳತ್ತ ಅಥವಾ ವಿದೇಶಗಳತ್ತ ವಲಸೆ ಹೋಗುತ್ತಿರುವುದು ವಯಸ್ಸಾದ ಪೋಷಕರ ಮೇಲೆ ತೀವ್ರ ಸಾಮಾಜಿಕ ಮತ್ತು ಮಾನಸಿಕ ಪರಿಣಾಮ ಬೀರಿದೆ.

ಮಕ್ಕಳು ದೂರ ಹೋದಾಗ, ಒಂಟಿ ಮನೆಯಲ್ಲಿ ಉಳಿಯುವ ವೃದ್ಧ ಪೋಷಕರಲ್ಲಿ ಭಾವನಾತ್ಮಕ ಶೂನ್ಯತೆ ಹಾಗೂ ಖಿನ್ನತೆ ಕಾಡತೊಡಗುತ್ತದೆ. ಇದರೊಂದಿಗೆ, ತುರ್ತು ಸಂದರ್ಭಗಳಲ್ಲಿ ಅಥವಾ ಅನಾರೋಗ್ಯದ ಸಮಯದಲ್ಲಿ ತಕ್ಷಣಕ್ಕೆ ಆಸರೆ ನೀಡಲು ಯಾರೂ ಇಲ್ಲದಿರುವುದು ಅವರಲ್ಲಿ ಅಭದ್ರತಾ ಭಾವನೆಯನ್ನು ಹೆಚ್ಚಿಸುತ್ತದೆ. ತಮ್ಮದೇ ಮನೆಯಲ್ಲಿ ತಾವು ಕೇವಲ ಅತಿಥಿಗಳಾಗುತ್ತಿದ್ದೇವೆ ಎಂಬ ಭಾವನೆ ಅವರ ಘನತೆಗೆ ಧಕ್ಕೆ ತರುತ್ತದೆ.

ವಿಭಕ್ತ ಕುಟುಂಬದಲ್ಲೂ ಸಾಧ್ಯವಿರುವ ಸ್ವಾಭಿಮಾನದ ಬದುಕು

ವಿಭಕ್ತ ಕುಟುಂಬಗಳ ಅನಿವಾರ್ಯತೆಯ ನಡುವೆಯೂ, ಹೆತ್ತವರ ಗೌರವ ಮತ್ತು ನೆಮ್ಮದಿಯನ್ನು ಕಾಯ್ದುಕೊಳ್ಳುವುದು ಸಾಧ್ಯವಿದೆ. ಅದಕ್ಕೆ ಬೇಕಿರುವುದು ಭೌತಿಕ ಸಾಮೀಪ್ಯಕ್ಕಿಂತ ಹೆಚ್ಚಾಗಿ, ಮನಸ್ಸುಗಳ ನಡುವಿನ ಭಾವನಾತ್ಮಕ ಬೆಸುಗೆ. ಪೋಷಕರು ವೃದ್ಧಾಪ್ಯದಲ್ಲೂ ಯಾರ ಮುಂದೆಯೂ ಕೈಚಾಚದೆ ಬದುಕಲು ಕೆಲವು ಕ್ರಮಗಳು ಸಹಕಾರಿಯಾಗಬಲ್ಲವು.

ಹೆತ್ತವರ ವೃದ್ಧಾಪ್ಯದ ದಿನಗಳಿಗಾಗಿ ಮೊದಲೇ ಸೂಕ್ತ ಆರೋಗ್ಯ ವಿಮೆ (Health Insurance) ಮತ್ತು ಸುಭದ್ರ ಉಳಿತಾಯದ ಯೋಜನೆಗಳನ್ನು ರೂಪಿಸುವುದರಿಂದ, ಅನಾರೋಗ್ಯದ ಸಮಯದಲ್ಲಿ ಅವರು ಆರ್ಥಿಕವಾಗಿ ಯಾರ ಮೇಲೂ ಅವಲಂಬಿತರಾಗಬೇಕಾಗಿ ಬರುವುದಿಲ್ಲ. ಇದರೊಂದಿಗೆ, ಪೋಷಕರು ವಯಸ್ಸಾದ ಮೇಲೂ ತಮಗೆ ಇಷ್ಟವಾದ ಹವ್ಯಾಸಗಳು, ಸಾಮಾಜಿಕ ಕೆಲಸಗಳು ಅಥವಾ ಸಣ್ಣಪುಟ್ಟ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮಕ್ಕಳು ಬೆಂಬಲ ನೀಡಬೇಕು. ಇದು ಅವರಲ್ಲಿ ನಾವಿನ್ನೂ ಸಮಾಜಕ್ಕೆ ಉಪಯುಕ್ತ ಎಂಬ ಭಾವನೆಯನ್ನು ಉಳಿಸುತ್ತದೆ.

ಆಸ್ತಿಗಾಗಿ ಕಿರುಕುಳ ಮತ್ತು ವೃದ್ಧಾಶ್ರಮಗಳ ಆತಂಕ

ಪೋಷಕರ ರಕ್ಷಣೆಯ ದೃಷ್ಟಿಯಿಂದ ಇಂದು ಆಧುನಿಕ ಸಮಾಜ ಎದುರಿಸುತ್ತಿರುವ ಎರಡು ಬಹುದೊಡ್ಡ ಸವಾಲುಗಳೆಂದರೆ ಆಸ್ತಿಗಾಗಿ ಹೆತ್ತವರನ್ನು ಪೀಡಿಸುವುದು ಮತ್ತು ಅವರನ್ನು ವೃದ್ಧಾಶ್ರಮಗಳಿಗೆ ತಳ್ಳುವುದು.

ಹೆತ್ತವರು ತಮ್ಮ ಜೀವಮಾನದ ಕಷ್ಟದ ಗಳಿಕೆಯನ್ನು ಮಕ್ಕಳ ಭವಿಷ್ಯಕ್ಕಾಗಿ ಮೀಸಲಿಟ್ಟಿರುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳಲು ಪೋಷಕರಿಗೆ ಮಾನಸಿಕ ಅಥವಾ ದೈಹಿಕ ಕಿರುಕುಳ ನೀಡಿ, ಒಮ್ಮೆ ಆಸ್ತಿ ಕೈ ಸೇರಿದ ಮೇಲೆ ಅವರನ್ನು ನಡುರಸ್ತೆಯಲ್ಲಿ ಕೈಬಿಡುವುದು ಅತ್ಯಂತ ಅಮಾನುಷ ಹಾಗೂ ಕಾನೂನುಬಾಹಿರ ಕೃತ್ಯವಾಗಿದೆ. ಆಸ್ತಿಗಿಂತ ಹೆತ್ತವರ ಜೀವ ಮತ್ತು ಗೌರವ ಮುಖ್ಯ ಎಂಬುದನ್ನು ಯುವ ಪೀಳಿಗೆ ಅರಿಯಬೇಕಿದೆ.

ಅದೇ ರೀತಿ, ವೃದ್ಧಾಶ್ರಮಗಳು ಎಂದಿಗೂ ಹೆತ್ತವರ ಸ್ವಂತ ಮನೆಗೆ ಪರ್ಯಾಯವಾಗಲು ಸಾಧ್ಯವಿಲ್ಲ. ಮಕ್ಕಳು ತಮಗೆ ಎಷ್ಟು ಕೆಲಸದ ಒತ್ತಡಗಳಿದ್ದರೂ, ಪೋಷಕರನ್ನು ವೃದ್ಧಾಶ್ರಮಗಳಿಗೆ ಕಳುಹಿಸದೇ ತಮ್ಮೊಂದಿಗೇ ಇಟ್ಟುಕೊಳ್ಳಬೇಕು. ಉದ್ಯೋಗದ ಅನಿವಾರ್ಯತೆಯಿಂದ ದೂರ ಇರಬೇಕಾಗಿ ಬಂದರೂ, ಅವರು ವಾಸಿಸುವ ವಾತಾವರಣ ಸುರಕ್ಷಿತ ಮತ್ತು ಗೌರವಾನ್ವಿತವಾಗಿರುವಂತೆ ನೋಡಿಕೊಳ್ಳಬೇಕೇ ಹೊರತು ಅವರನ್ನು ಅನಾಥ ಆಶ್ರಮಗಳಿಗೆ ತಳ್ಳಬಾರದು.

ಮಕ್ಕಳಿಂದ ಹೆತ್ತವರಿಗೆ ಸಿಗಬೇಕಾದ ನೆರವು

ವಿಶ್ವ ಪೋಷಕರ ದಿನದ ನಿಜವಾದ ಯಶಸ್ಸು ಇರುವುದು ವರ್ಷಕ್ಕೊಮ್ಮೆ ಸಾಮಾಜಿಕ ಜಾಲತಾಣಗಳಲ್ಲಿ ಶುಭ ಹಾರೈಸುವುದರಲ್ಲಲ್ಲ; ಬದಲಿಗೆ ನಿತ್ಯದ ಬದುಕಿನಲ್ಲಿ ಅವರಿಗೆ ಮೂರು ಪ್ರಮುಖ ಆಯಾಮಗಳಲ್ಲಿ ಆಸರೆಯಾಗುವುದರಲ್ಲಿ ಅಡಗಿದೆ. ಈ ನಿಟ್ಟಿನಲ್ಲಿ ಮಕ್ಕಳು ಕೆಲವು ಅತ್ಯಗತ್ಯ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ:

ನೈತಿಕ ಬೆಂಬಲ (Moral Support): ಹೆತ್ತವರ ಸ್ವಾಯತ್ತತೆ ಹಾಗೂ ನಿರ್ಧಾರಗಳನ್ನು ಗೌರವಿಸುವುದು, ಅವರ ಸುದೀರ್ಘ ಬದುಕಿನ ಅನುಭವದ ನುಡಿಗಳಿಗೆ ಕಿವಿಗೊಡುವುದು ಮತ್ತು ಕುಟುಂಬದ ಪ್ರಮುಖ ನಿರ್ಧಾರಗಳಲ್ಲಿ ಅವರ ಸಲಹೆಗಳನ್ನು ಕೇಳುವ ಮೂಲಕ ಅವರಿಗೆ ಮನೆಯಲ್ಲಿ ಉನ್ನತ ಸ್ಥಾನ ನೀಡಬೇಕು. ಇದು ಅವರ ಮಾನಸಿಕ ಸ್ಥಿರತೆಯನ್ನು ಕಾಪಾಡುತ್ತದೆ.

ಆರ್ಥಿಕ ಭದ್ರತೆ (Financial Support): ವಯಸ್ಸಾದ ಕಾಲದಲ್ಲಿ ಅವರ ನಿತ್ಯದ ಔಷಧೋಪಚಾರ, ಪೌಷ್ಟಿಕ ಆಹಾರ ಮತ್ತು ಒಟ್ಟಾರೆ ಜೀವನ ನಿರ್ವಹಣೆಗೆ ಯಾವುದೇ ಕೊರತೆಯಾಗದಂತೆ ಮುಂಚಿತವಾಗಿಯೇ ವ್ಯವಸ್ಥೆ ಮಾಡಬೇಕು. ಹೆತ್ತವರು ಸಂಕೋಚ ಅಥವಾ ಮುಜುಗರದಿಂದ ಹಣ ಕೇಳುವ ಪರಿಸ್ಥಿತಿಯನ್ನು ತರದೆ, ಅವರ ಅಗತ್ಯಗಳನ್ನು ತಾವಾಗಿಯೇ ಅರಿತು ಗೌರವಪೂರ್ವಕವಾಗಿ ಪೂರೈಸಬೇಕು.

ಭಾವನಾತ್ಮಕ ಆಸರೆ (Emotional Support): ಇಂದಿನ ಧಾವಂತದ ಮತ್ತು ಯಾಂತ್ರಿಕ ಬದುಕಿನಲ್ಲಿ ಹೆತ್ತವರಿಗೆ ಅತ್ಯಂತ ಹೆಚ್ಚು ಬೇಕಾಗಿರುವುದು ಮಕ್ಕಳ 'ಸ್ವಲ್ಪ ಸಮಯ'. ಪ್ರತಿದಿನ ದೂರವಾಣಿಯಲ್ಲಾದರೂ ಕನಿಷ್ಠ ಹತ್ತು ನಿಮಿಷಗಳ ಕಾಲ ಯಾವುದೇ ವ್ಯಾಕುಲತೆಯಿಲ್ಲದೆ ಪ್ರೀತಿಯಿಂದ ಮಾತನಾಡುವುದು ಮತ್ತು ಅವರ ಕ್ಷೇಮ ವಿಚಾರಿಸುವುದು ವೃದ್ಧಾಪ್ಯದ ಒಂಟಿತನದ ವಿರುದ್ಧ ಹೋರಾಡಲು ಅವರಿಗೆ ಬೃಹತ್ ಮಾನಸಿಕ ಶಕ್ತಿಯನ್ನು ನೀಡುತ್ತದೆ.

**ಪೋಷಕರ ಆರೋಗ್ಯ ಮತ್ತು ಸದೃಢತೆಗೆ ಮಾರ್ಗದರ್ಶನ**

ವಯಸ್ಸಾಗುತ್ತಿದ್ದಂತೆ ದೇಹದ ಶಕ್ತಿ ಕುಂದುತ್ತಾ ಬರುವುದು ನಿಸರ್ಗ ನಿಯಮ. ಈ ಹಂತದಲ್ಲಿ ಮಕ್ಕಳು ತಮ್ಮ ಪೋಷಕರ ಆರೋಗ್ಯದ ಕಡೆಗೆ ವಿಶೇಷ ಗಮನ ಹರಿಸಬೇಕು ಮತ್ತು ಆಧುನಿಕ ಫಿಟ್‌ನೆಸ್ ಹಾಗೂ ಪೌಷ್ಟಿಕಾಂಶದ ಬಗ್ಗೆ ಅವರಿಗೆ ತಿಳಿಹೇಳಬೇಕು.

ಮೊದಲನೆಯದಾಗಿ, ವಯಸ್ಸಿಗೆ ಅನುಗುಣವಾಗಿ ಜೀರ್ಣಶಕ್ತಿ ಸುಲಭವಾಗಿರುವ, ಪೋಷಕಾಂಶ ಭರಿತ ಆಹಾರವನ್ನು ನೀಡಬೇಕು. ಸಕ್ಕರೆ, ಉಪ್ಪು ಮತ್ತು ಅನಾರೋಗ್ಯಕರ ಕೊಬ್ಬಿನಂಶದ ನಿಯಂತ್ರಣದ ಬಗ್ಗೆ ಕಾಳಜಿ ವಹಿಸಬೇಕು. ಎರಡನೆಯದಾಗಿ, ನಿತ್ಯವೂ ಮುಂಜಾನೆ ಅಥವಾ ಸಂಜೆ ನಿಯಮಿತವಾಗಿ ವಾಕಿಂಗ್ (ನಡಿಗೆ) ಮಾಡುವುದರಿಂದ ಅವರ ರಕ್ತಪರಿಚಲನೆ ಮತ್ತು ಮೂಳೆಗಳ ಆರೋಗ್ಯ ವೃದ್ಧಿಸುತ್ತದೆ.

ಮೂರನೆಯದಾಗಿ, ವೃದ್ಧಾಪ್ಯದಲ್ಲಿ ಕೇವಲ ನಡಿಗೆ ಸಾಕಾಗುವುದಿಲ್ಲ. ತಜ್ಞರ ಸಲಹೆಯ ಮೇರೆಗೆ ವಯಸ್ಸಾದವರಿಗಾಗಿಯೇ ಇರುವ ಲಘು ತೂಕ ಎತ್ತುವ ವ್ಯಾಯಾಮ ಅಥವಾ ರೆಸಿಸ್ಟೆನ್ಸ್ ಟ್ರೈನಿಂಗ್ (Resistance Training) ಮಾಡಲು ಪ್ರೋತ್ಸಾಹಿಸಬೇಕು. ಇದು ಅವರ ಸ್ನಾಯುಗಳ ದ್ರವ್ಯರಾಶಿಯನ್ನು ಕಾಯ್ದುಕೊಳ್ಳಲು (ಒಣಭಿಟಜ ಒಘಿ) ಮತ್ತು ದೇಹದ ಸಮತೋಲನ ತಪ್ಪಿ ಬಿದ್ದು ಮೂಳೆ ಮುರಿತಕ್ಕೊಳಗಾಗುವುದನ್ನು ತಡೆಯಲು ಅತ್ಯಂತ ಅಗತ್ಯವಾಗಿದೆ.

ಹವ್ಯಾಸಗಳ ಪೋಷಣೆ ಮತ್ತು ಪ್ರೋತ್ಸಾಹ

ನಿವೃತ್ತಿಯ ನಂತರದ ಜೀವನದಲ್ಲಿ ಪೋಷಕರಿಗೆ ಸೃಜನಾತ್ಮಕ ತೊಡಗಿಸಿಕೊಳ್ಳುವಿಕೆ ಬಹಳ ಮುಖ್ಯ. ಮಕ್ಕಳು ತಮ್ಮ ಹೆತ್ತವರಲ್ಲಿ ಸುಪ್ತವಾಗಿರುವ ಹವ್ಯಾಸಗಳನ್ನು ಗುರುತಿಸಿ, ಅವುಗಳನ್ನು ಮರುಜೀವಗೊಳಿಸಲು ಪ್ರೋತ್ಸಾಹಿಸಬೇಕು.

ಅವರಿಗೆ ಓದಲು ಇಷ್ಟವಾದರೆ ಪುಸ್ತಕಗಳನ್ನು ತಂದುಕೊಡುವುದು, ಬರವಣಿಗೆ, ಗಿಡಗಳನ್ನು ಬೆಳೆಸುವ ಗಾರ್ಡನಿಂಗ್, ಸಂಗೀತ ಆಲಿಸುವುದು ಅಥವಾ ಆಧ್ಯಾತ್ಮಿಕ ಚಿಂತನೆಗಳ ಕಡೆಗೆ ಒಲವಿದ್ದರೆ ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡಬೇಕು. ಇಂತಹ ಹವ್ಯಾಸಗಳು ವೃದ್ಧಾಪ್ಯದ ಬೇಸರ ಹಾಗೂ ಒಂಟಿತನವನ್ನು ದೂರ ಓಡಿಸಿ, ಮೆದುಳನ್ನು ಸಕ್ರಿಯವಾಗಿಡುತ್ತವೆ ಮತ್ತು ಆಲ್ಝೈಮರ್ಸ್ ಹಾಗೂ ಡಿಮೆನ್ಶಿಯಾದಂತಹ ನರಸಂಬಂಧಿ ಕಾಯಿಲೆಗಳಿಂದ ದೂರವಿಡುತ್ತವೆ.


ನಮ್ಮ ಇಂದಿನ ಯಶಸ್ಸು, ಶಿಕ್ಷಣ ಮತ್ತು ಭವ್ಯ ಸೌಕರ್ಯಗಳ ಹಿಂದೆ ಹೆತ್ತವರ ದಶಕಗಳ ಶ್ರಮ, ಕಣ್ಣೀರು ಹಾಗೂ ಪ್ರಾರ್ಥನೆಗಳಿರುತ್ತವೆ. ಕಾಲ ಬದಲಾಗಬಹುದು, ಕುಟುಂಬದ ಸ್ವರೂಪ ಬದಲಾಗಬಹುದು; ಆದರೆ ಹೆತ್ತವರ ಒಳಿತನ್ನು ಬಯಸುವ ನಮ್ಮ ಜವಾಬ್ದಾರಿ ಎಂದಿಗೂ ಬದಲಾಗಬಾರದು. ಈ ವಿಶ್ವ ಪೋಷಕರ ದಿನದಂದು, ನಮ್ಮನ್ನು ಜಗತ್ತಿಗೆ ಪರಿಚಯಿಸಿದ ಆ ಜೀವಗಳಿಗೆ ಕೃತಜ್ಞರಾಗಿರೋಣ ಮತ್ತು ಅವರ ಶರತ್ಕಾಲದ ಬದುಕು ಹಸನಾಗಿ ಹಾಗೂ ಅತ್ಯಂತ ಗೌರವಾನ್ವಿತವಾಗಿ ಇರುವಂತೆ ನೋಡಿಕೊಳ್ಳುವ ಸಂಕಲ್ಪ ಮಾಡೋಣ.




| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಬೆಂಕಿ ಮತ್ತು ಬೆಳಕು

ಮನದ ಮಾತು...



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.



ವೇದಗಳಲ್ಲಿ ಅಗ್ನಿ ಅತ್ಯಂತ ಪ್ರಮುಖ ದೈವತ್ವಗಳಲ್ಲಿ ಒಂದು. ಋಗ್ವೇದದ ಮೊದಲ ಮಂತ್ರವೇ ಅಗ್ನಿದೇವನ ಸ್ತುತಿಯಿಂದ ಆರಂಭವಾಗುತ್ತದೆ: ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ ಋಗ್ವೇದ ಇಲ್ಲಿ ಅಗ್ನಿಯನ್ನು ಯಜ್ಞದ ಪುರೋಹಿತ, ದೇವತೆಗಳಿಗೂ ಮಾನವರಿಗೂ ಮಧ್ಯಸ್ಥ, ಶುದ್ಧೀಕರಣದ ಶಕ್ತಿ, ಜ್ಞಾನ ಮತ್ತು ಬೆಳಕಿನ ಪ್ರತೀಕ ಎಂದು ವರ್ಣಿಸಲಾಗಿದೆ. ಉಪನಿಷತ್ತುಗಳು ಮತ್ತು ವೇದಸಾಹಿತ್ಯದಲ್ಲಿ ಅಗ್ನಿ ಕೇವಲ ಬೆಂಕಿ ಮಾತ್ರವಲ್ಲ; ಅದು ಜೀವನ, ಜ್ಞಾನ, ಪರಿವರ್ತನೆ ಮತ್ತು ಬ್ರಹ್ಮತತ್ತ್ವದ ಪ್ರತೀಕವಾಗಿ ಕಾಣುತ್ತದೆ. ಮಾನವನ ಜೀವನದ ಹಲವು ಹಂತಗಳಲ್ಲಿ ಅಗ್ನಿಯ ಬಳಕೆಯನ್ನು ಭಾರತೀಯ ಚಿಂತನೆ ಬಹಳ ಆಳವಾಗಿ ನೋಡಿದೆ.

1. ಹೋಮದ ಅಗ್ನಿ ಯಜ್ಞ ಹೋಮದಲ್ಲಿ ಅಗ್ನಿ ದೇವತೆಗಳಿಗೆ ಅರ್ಪಣೆಯನ್ನು ತಲುಪಿಸುವ ಮಧ್ಯಸ್ಥ.
   ಇದು ಶುದ್ಧೀಕರಣ ಮತ್ತು ಆತ್ಮೋನ್ನತಿಯ ಸಂಕೇತ. ಛಾಂದೋಗ್ಯ ಉಪನಿಷದ ಹಾಗೂ ಬೃಹದಾರಣ್ಯಕ ಉಪನಿಷದಗಳಲ್ಲಿ ಅಗ್ನಿಯನ್ನು ಜ್ಞಾನ ಮತ್ತು ಪ್ರಾಣಶಕ್ತಿಯ ರೂಪಕವಾಗಿ ಕಾಣಬಹುದು. ಹೋಮದ ಅಗ್ನಿಯ ಸುತ್ತ ಮಂತ್ರಧ್ವನಿ, ಆಹುತಿ, ತುಪ್ಪದ ಪರಿಮಳ ಇವೆಲ್ಲವೂ ಮನಸ್ಸನ್ನು ಏಕಾಗ್ರಗೊಳಿಸಿ ಒಳಗಿನ ಚೈತನ್ಯವನ್ನು ಜಾಗೃತಗೊಳಿಸುವ ಸಾಧನಗಳೆಂದು ಪರಿಗಣಿಸಲಾಗಿದೆ.
   ಅಗ್ನಿ ಇಲ್ಲಿ ಕೇವಲ ಸುಡುವ ಶಕ್ತಿಯಲ್ಲ; ಅದು ಅಶುದ್ಧಿಯನ್ನು ಭಸ್ಮಗೊಳಿಸಿ, ಶ್ರದ್ಧೆಯನ್ನು ಬೆಳಗಿಸುವ ದಿವ್ಯಶಕ್ತಿ.
2. ಪಾಕದ ಅಗ್ನಿ ಅಡುಗೆಯ ಬೆಂಕಿ ಮಾನವ ಸಂಸ್ಕೃತಿಯ ಆರಂಭವೆಂದು ಪರಿಗಣಿಸಲಾಗಿದೆ. ಕಚ್ಚಾದನ್ನು ಪಕ್ವಗೊಳಿಸುವ ಶಕ್ತಿ ಅಗ್ನಿ. ಉಪನಿಷತ್ತುಗಳಲ್ಲಿ ಇದನ್ನು ರೂಪಾಂತರದ ಶಕ್ತಿ ಎಂದು ದಾರ್ಶನಿಕವಾಗಿ ನೋಡುತ್ತಾರೆ ಅಜ್ಞಾನವನ್ನು ಜ್ಞಾನವಾಗಿಸುವಂತದ್ದು. ಅನ್ನಪಾಕದಲ್ಲಿ ಅಗ್ನಿ ದೇಹಕ್ಕೆ ಪೋಷಣೆ ನೀಡಿದರೆ, ಜ್ಞಾನಾಗ್ನಿ ಮನಸ್ಸಿಗೆ ಪೋಷಣೆ ನೀಡುತ್ತದೆ ಎಂಬ ಭಾವನೆ ಭಾರತೀಯ ಚಿಂತನೆಯಲ್ಲಿದೆ. ಅದರಲ್ಲಿಯೇ ನಮ್ಮ ಸಂಸ್ಕೃತಿಯಲ್ಲಿ ಅನ್ನಂ ಬ್ರಹ್ಮ ಎಂದು ಹೇಳಲಾಗಿದೆ. ಅಡುಗೆಮನೆಯ ಒಲೆ ಕೇವಲ ಹೊಗೆ ಬಿಡುವ ಸ್ಥಳವಲ್ಲ; ಅದು ಮನೆಯ ಉಷ್ಣತೆ, ಪ್ರೀತಿ ಮತ್ತು ಜೀವಾಳದ ಕೇಂದ್ರವಾಗಿತ್ತು.
3. ಚಿತೆಯ ಅಗ್ನಿ ಅಂತ್ಯಕ್ರಿಯೆಯ ಅಗ್ನಿ ದೇಹದ ಪಂಚಭೂತಗಳಲ್ಲಿ ಲಯವನ್ನು ಸೂಚಿಸುತ್ತದೆ. ದೇಹ ನಾಶವಾಗುತ್ತದೆ, ಆತ್ಮ ಶಾಶ್ವತ ಎಂಬ ಭಾವನೆ ಇಲ್ಲಿ ಮುಖ್ಯ. ಗೀತೆಯಲ್ಲಿ ಹೇಳಲಾಗಿದೆ: ನೈನಂ ದಹತಿ ಪಾವಕಃ ಅಂದರೆ ಅಗ್ನಿ ಆತ್ಮವನ್ನು ದಹಿಸಲಾರದು. ಆತ್ಮ ಶಾಶ್ವತ; ದೇಹ ಮಾತ್ರ ನಾಶವಾಗುವುದು. ಚಿತೆಯ ಅಗ್ನಿ ಜೀವನದ ಅನಿತ್ಯತೆಯನ್ನು ನೆನಪಿಸುತ್ತದೆ. ಜನನದಿಂದ ಮರಣದವರೆಗೆ ಸಾಗುವ ಮಾನವಯಾತ್ರೆಯ ಅಂತಿಮ ದೇಹಧರ್ಮವೇ ಈ ಅಗ್ನಿಯಲ್ಲಿ ಲಯವಾಗುವುದು. ಆದರೆ ಭಾರತೀಯ ದರ್ಶನದ ಪ್ರಕಾರ ಅದು ಅಂತ್ಯವಲ್ಲ ಒಂದು ಪರಿವರ್ತನೆ. ಅಗ್ನಿ ಉತ್ಪಲನ ಒಳಅರ್ಥ ಉತ್ಪಲನ ಎಂದರೆ ಹೊರತೆಗೆದು ಜಾಗೃತಗೊಳಿಸುವುದು ಅಥವಾ ಪ್ರಜ್ವಲಿಸುವುದು ಎಂಬ ಅರ್ಥದಲ್ಲಿ ಬಳಸಬಹುದು. ವೇದ ಉಪನಿಷತ್ ಚಿಂತನೆ ಪ್ರಕಾರ: ಹೊರಗಿನ ಅಗ್ನಿ ಯಜ್ಞದಲ್ಲಿ ಬೆಳಗುತ್ತದೆ, ಒಳಗಿನ ಅಗ್ನಿ ಜ್ಞಾನ, ಚೇತನ ಮತ್ತು ತಪಸ್ಸಾಗಿ ಬೆಳಗಬೇಕು. ಅದಕ್ಕಾಗಿ ವೇದಗಳಲ್ಲಿ ಅಗ್ನಿ: ಬೆಳಕು, ಚೈತನ್ಯ, ಜ್ಞಾನ, ಜೀವನಚಕ್ರ, ಮತ್ತು ಪರಿವರ್ತನೆಯ ಮಹಾಶಕ್ತಿ ಎಂದು ಕಾಣಲ್ಪಟ್ಟಿದೆ.

ಅಗ್ನಿ ಪರಿಕ್ರಮ ಮತ್ತು ಅಗ್ನಿ ಪ್ರಜ್ವಲನೆಯ ವಿಧಾನಗಳು ವೇದಪರಂಪರೆಯಲ್ಲಿ ಅಗ್ನಿ ಪರಿಕ್ರಮ ಎಂಬುದನ್ನು ಕೆಲವೊಮ್ಮೆ ಅಗ್ನಿಯನ್ನು ಸುತ್ತುವ ಪ್ರದಕ್ಷಿಣೆ ಎಂದೂ, ಕೆಲವೊಮ್ಮೆ ಅಗ್ನಿಯನ್ನು ಉದ್ಭವಿಸುವ ಅಥವಾ ಪ್ರಜ್ವಲಿಸುವ ವಿಧಾನ ಎಂದೂ ಹೇಳಬಹುದು. ಭಾರತೀಯ ವೇದಸಂಸ್ಕೃತಿಯಲ್ಲಿ ಅಗ್ನಿಯನ್ನು ಸಾಮಾನ್ಯ ಬೆಂಕಿಯಂತೆ ಕಾಣದೆ, ಪವಿತ್ರ ಶಕ್ತಿಯಾಗಿ ಉದ್ಭವಿಸಲಾಗುತ್ತಿತ್ತು.

1. ಅರಣಿ ಮಂಥನ (ಅಗ್ನಿ ಉತ್ಪಲನ) ಇದು ಅತ್ಯಂತ ಪ್ರಾಚೀನ ವೈದಿಕ ವಿಧಾನ. ಋಗ್ವೇದದಲ್ಲಿ ಅಗ್ನಿಯ ಪ್ರಜ್ವಲನೆ ವಿಭಿನ್ನ ವಿಧಾನಗಳ ಮೇಲೆ ಅವಲಂಬಿಸಿದೆ. ವಿಧಾನ ಎರಡು ವಿಶೇಷ ಮರದ ಕಡ್ಡಿಗಳು ಅರಣಿ ಒಂದು ಅಧರಾರಣಿ (ಕೆಳಭಾಗ) ಒಂದು ಉತ್ತರಾರಣಿ (ಮೇಲ್ಭಾಗ) ಇವೆರಡನ್ನು ತಿರುಗಿಸಿ ಘರ್ಷಣೆ ಉಂಟುಮಾಡಿ ಅಗ್ನಿ ಹೊರತೆಗೆದುಕೊಳ್ಳುತ್ತಿದ್ದರು. ತಾತ್ಪರ್ಯ ಘರ್ಷಣೆಯಿಂದ ಜ್ಞಾನೋದಯ ತಪಸ್ಸಿನಿಂದ ಚೈತನ್ಯೋದಯ ಸೃಷ್ಟಿಯ ಆರಂಭ ಇದನ್ನೇ ಅಗ್ನಿ ಉತ್ಪಲನ ಎಂದು ಕರೆಯುತ್ತಾರೆ. ಒಂದು ರೀತಿ ಆತ್ಮಾವಲೋಕನದ ಉತ್ಕರ್ಷಣದಿಂದ ಉಂಟಾದ ಜ್ಞಾನಾಗ್ನಿ.
2. ಸೂರ್ಯಕಾಂತದಿಂದ ಅಗ್ನಿ ಪ್ರಾಚೀನ ಕಾಲದಲ್ಲಿ ಸೂರ್ಯರಶ್ಮಿಯನ್ನು ಕನ್ನಡಿಯಂತೆ ಕೇಂದ್ರೀಕರಿಸಿ ಅಗ್ನಿ ಹುಟ್ಟಿಸುತ್ತಿದ್ದರು. ಅರ್ಥ ಸೂರ್ಯನೇ ಮೂಲ ಅಗ್ನಿ ದೈವಿಕ ಬೆಳಕಿನಿಂದ ಯಜ್ಞಾಗ್ನಿ ಇದರಲ್ಲಿ ಒಂದು ಗಾಢ ಸಂದೇಶ ಅಡಗಿದೆ ಎಲ್ಲಾ ಬೆಳಕಿನ ಮೂಲ ಒಂದೇ.
3. ಗಾರ್ಹಪತ್ಯ ಅಗ್ನಿ ಗೃಹಸ್ಥಾಶ್ರಮದಲ್ಲಿ ಸ್ಥಾಪಿಸುವ ನಿತ್ಯ ಅಗ್ನಿ. ವಿಶೇಷತೆ ಮನೆಯ ಪವಿತ್ರ ಅಗ್ನಿ ಅದರಿಂದಲೇ ಹೋಮ ಮತ್ತು ಪಾಕ ವೈದಿಕ ಕುಟುಂಬಗಳಲ್ಲಿ ಈ ಅಗ್ನಿಯನ್ನು ನಂದಿಸದೆ ಕಾಪಾಡುವ ಪದ್ಧತಿ ಇತ್ತು. ಕೆಲವು ಕಡೆ ಅಗ್ನಿಹೋತ್ರ ನಿತ್ಯ ಮಾಡುವ ಪರಂಪರೆ ಇರುವ ಕುಟುಂಬಗಳು ಅಗ್ನಿಯನ್ನು ಸಂಪೂರ್ಣ ನಂದಿಸುವುದಿಲ್ಲ. ಕೆಂಡದ ರೂಪದಲ್ಲಾದರೂ ಅದನ್ನು ಸಂರಕ್ಷಿಸಿ ತಲೆಮಾರುಗಳಿಂದ ಮುಂದುವರಿಸುತ್ತಿದ್ದರು. ಗೃಹಪ್ರವೇಶದಿಂದ ಹಿಡಿದು ಜೀವನದ ಅನೇಕ ಶುಭಕಾರ್ಯಗಳಲ್ಲಿ ಇದೇ ಅಗ್ನಿಯ ನಿರಂತರತೆ ಕಾಣುತ್ತಿತ್ತು. ಭೋಪಾಲ್ ವಿಷವಾಯು ದುರಂತದ ಸಂದರ್ಭದಲ್ಲಿ ಎರಡು ಕುಟುಂಬಗಳು ಆಶ್ಚರ್ಯಕರವಾಗಿ ಬದುಕುಳಿದಿದ್ದವು ಎಂಬ ಮಾತು ಪ್ರಸಿದ್ಧವಾಗಿದೆ; ಅವರ ಮನೆಯಲ್ಲಿ ನಿತ್ಯ ಅಗ್ನಿಹೋತ್ರ ನಡೆಯುತ್ತಿತ್ತೆಂದು ಹೇಳಲಾಗುತ್ತದೆ. ಇದನ್ನು ಅನೇಕರು ಆಧ್ಯಾತ್ಮಿಕ ಶಕ್ತಿಯ ಸಂಕೇತವಾಗಿ ನೋಡುತ್ತಾರೆ.
4. ಆಹವನೀಯ ಅಗ್ನಿ ಯಜ್ಞಕುಂಡದಲ್ಲಿ ದೇವತೆಗಳಿಗೆ ಆಹುತಿ ಅರ್ಪಿಸುವ ಅಗ್ನಿ. ಉಪಯೋಗ ಹೋಮ ಯಜ್ಞ ವೇದಮಂತ್ರಗಳ ಆಹುತಿ ಇದು ದೇವಸಂಪರ್ಕದ ಪ್ರತೀಕ.
5. ದಕ್ಷಿಣಾಗ್ನಿ ಮುಖ್ಯವಾಗಿ ಪಿತೃಕಾರ್ಯ ಮತ್ತು ಅಂತ್ಯಕರ್ಮಗಳಿಗೆ ಸಂಬಂಧಿಸಿದ ಅಗ್ನಿ. ತಾತ್ಪರ್ಯ ಪೂರ್ವಜರ ಸ್ಮರಣೆ ಜೀವನದಿಂದ ಲಯದ ಯಾತ್ರೆ ಮೂರು ಅಗ್ನಿಗಳ ತತ್ವ ವೈದಿಕ ಪರಂಪರೆಯಲ್ಲಿ ಮೂರು ಮುಖ್ಯ ಅಗ್ನಿಗಳು: ಗಾರ್ಹಪತ್ಯ ಆಹವನೀಯ ದಕ್ಷಿಣಾಗ್ನಿ ಇವುಗಳನ್ನು ಜೀವನದ ಮೂರು ಆಯಾಮಗಳಾಗಿ ನೋಡುತ್ತಾರೆ: ಜೀವನ ದೇವಪೂಜೆ ಪಿತೃಸ್ಮರಣೆ ಉಪನಿಷತ್ತಿನ ಒಳಾರ್ಥ ಕಾಠೋಪನಿಷತಿನಲ್ಲಿ ನಾಚಿಕೇತಾಗ್ನಿ ಎಂಬ ಜ್ಞಾನಾಗ್ನಿಯ ಉಲ್ಲೇಖ ಬರುತ್ತದೆ. ಅದರ ಪ್ರಕಾರ: ಹೊರಗಿನ ಅಗ್ನಿ ಯಜ್ಞಕ್ಕೆ, ಒಳಗಿನ ಅಗ್ನಿ ಆತ್ಮಜ್ಞಾನಕ್ಕೆ. ಮಾನವನೊಳಗಿನ ಕಾಮ, ಕ್ರೋಧ, ಲೋಭಗಳನ್ನು ಭಸ್ಮಗೊಳಿಸಿ ಸತ್ಯಜ್ಞಾನವನ್ನು ಬೆಳಗಿಸುವುದೇ ನಿಜವಾದ ಯಜ್ಞ ಎಂದು ಉಪನಿಷತ್ತುಗಳು ಸಾರುತ್ತವೆ. ಬೆಳಕು ಕೇವಲ ಪ್ರಕಾಶವಲ್ಲ ಭಾರತೀಯ ದರ್ಶನದಲ್ಲಿ ಬೆಳಕು ಎಂದರೆ ಕೇವಲ ಕಣ್ಣಿಗೆ ಕಾಣುವ ಪ್ರಕಾಶವಲ್ಲ. ಅದು: ಜ್ಞಾನ, ವಿವೇಕ, ಧರ್ಮ, ಸತ್ಯದ ಅರಿವು. ಅದಕ್ಕಾಗಿ ಉಪನಿಷತ್ತಿನಲ್ಲಿ ಪ್ರಾರ್ಥಿಸಲಾಗಿದೆ: ತಮಸೋ ಮಾ ಜ್ಯೋತಿರ್ಗಮಯ ಅಂದರೆ ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನತ್ತ ಕರೆದೊಯ್ಯು. ಬೆಳಕು ಮಾನವನ ದಾರಿಗೆ ದಿಕ್ಕು ತೋರಿಸಿದರೆ, ಬೆಂಕಿ ಅವನೊಳಗಿನ ಶಕ್ತಿಯನ್ನು ಜಾಗೃತಗೊಳಿಸುತ್ತದೆ. ಬೆಂಕಿ ಮತ್ತು ಮಾನವ ನಾಗರಿಕತೆ ಬೆಂಕಿಯ ಆವಿಷ್ಕಾರ ಮಾನವ ಇತಿಹಾಸದ ಮಹತ್ತರ ತಿರುವು. ಚಳಿಯಿಂದ ರಕ್ಷಣೆ, ಆಹಾರದ ಪಾಕ, ಲೋಹಗಳ ಕರಗುವಿಕೆ, ಕೈಗಾರಿಕೆಯ ಉದಯ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಇವೆಲ್ಲಕ್ಕೂ ಮೂಲದಲ್ಲಿ ಅಗ್ನಿಯೇ ಇದೆ. ಆದರೆ ಇದೇ ಅಗ್ನಿ ನಿಯಂತ್ರಣ ಕಳೆದುಕೊಂಡರೆ ವಿನಾಶದ ರೂಪ ತಾಳುತ್ತದೆ.




ಆದ್ದರಿಂದ ಭಾರತೀಯ ಚಿಂತನೆ ಅಗ್ನಿಯನ್ನು ಪೂಜಿಸಿತು; ಆದರೆ ಅದನ್ನು ನಿಯಂತ್ರಿತ ಶಕ್ತಿಯಾಗಿ ಉಪಯೋಗಿಸುವ ಮೌಲ್ಯವನ್ನೂ ಕಲಿಸಿತು. ಜೀವನವೇ ಅಗ್ನಿಯ ಪರಿಕ್ರಮೆ ಹೀಗೆ ನೋಡಿದರೆ ಮಾನವನ ಸಂಪೂರ್ಣ ಜೀವನವೇ ಅಗ್ನಿಯ ಪರಿಕ್ರಮೆಯಂತಿದೆ ಹೋಮದಲ್ಲಿ ಪೂಜೆ, ಪಾಕದಲ್ಲಿ ಪೋಷಣೆ, ವಿವಾಹದಲ್ಲಿ ಪ್ರತಿಜ್ಞೆ, ತಪಸ್ಸಿನಲ್ಲಿ ಜ್ಞಾನ, ಚಿತೆಯಲ್ಲಿ ಲಯ. ಬೆಂಕಿ ಸುಡುವ ಶಕ್ತಿ; ಬೆಳಕು ದಾರಿ ತೋರಿಸುವ ಶಕ್ತಿ. ಭಾರತೀಯ ವೇದ ಉಪನಿಷತ್ತುಗಳು ಈ ಎರಡನ್ನೂ ಜೀವನದ ದ್ವಂದ್ವಸ್ವರೂಪವಾಗಿ ಕಂಡಿವೆ. ನಿಯಂತ್ರಿತ ಅಗ್ನಿ ನಾಗರಿಕತೆಯನ್ನು ಕಟ್ಟುತ್ತದೆ; ಜ್ಞಾನದಿಂದ ಬೆಳಗಿದ ಬೆಳಕು ಮಾನವನನ್ನು ಆತ್ಮಸಾಕ್ಷಾತ್ಕಾರದತ್ತ ಕೊಂಡೊಯ್ಯುತ್ತದೆ. ಆದ್ದರಿಂದ ಭಾರತೀಯ ಚಿಂತನೆ ಹೇಳುತ್ತದೆ ಹೊರಗಿನ ಅಗ್ನಿ ದೇಹವನ್ನು ಉಷ್ಣಗೊಳಿಸುತ್ತದೆ; ಒಳಗಿನ ಜ್ಞಾನಜ್ಯೋತಿ ಜೀವನವನ್ನು ಪ್ರಕಾಶಗೊಳಿಸುತ್ತದೆ. ನುಡಿಗಟ್ಟುಗಳು / ಖಟಅಂಚಿಟಿ ಬೆಂಕಿ ಸುಡಲಿ ಅಜ್ಞಾನ; ಬೆಳಕು ಬೆಳಗಲಿ ಜ್ಞಾನ. ಅಗ್ನಿ ಶುದ್ಧಿಯ ಸಂಕೇತ; ಬೆಳಕು ಸತ್ಯದ ಸಂಕೇತ. ಒಳಗೆ ಜ್ಞಾನಜ್ಯೋತಿ ಹೊತ್ತರೆ ಬದುಕೇ ದೀಪೋತ್ಸವ. ಬೆಂಕಿ ಶಕ್ತಿ; ಬೆಳಕು ದಿಕ್ಕು. ಅಗ್ನಿ ಉರಿದರೆ ಉಷ್ಣ; ಜ್ಞಾನ ಉರಿದರೆ ಉಜ್ವಲ ಭವಿಷ್ಯ. ತಮಸಿನಿಂದ ಜ್ಯೋತಿಯತ್ತ ಸಾಗುವುದು ಜೀವನದ ನಿಜಯಾತ್ರೆ. ಅಗ್ನಿ ದೇಹವನ್ನು ತಾಪಿಸುತ್ತದೆ; ಜ್ಞಾನ ಆತ್ಮವನ್ನು ತೇಜಸ್ವಿಗೊಳಿಸುತ್ತದೆ. ಬೆಂಕಿಯ ನಿಯಂತ್ರಣ ನಾಗರಿಕತೆ; ಬೆಳಕಿನ ಅರಿವು ಸಂಸ್ಕೃತಿ. ಜೀವನದ ಅಂಧಕಾರವನ್ನು ಹೋಗಲಾಡಿಸುವುದು ಜ್ಞಾನಜ್ಯೋತಿ. ಒಂದು ದೀಪ ಸಾವಿರ ಕತ್ತಲೆಗಳನ್ನು ದೂರ ಮಾಡುತ್ತದೆ.

---

# ನಗುವೆಂಬ ಔಷಧಿ!

ಸ್ನೇಹ ಲೋಕ



ಸ್ನೇಹಾ ಆನಂದ್

ನೋವು ಯಾರಿಗಿರುವುದಿಲ್ಲ ಹೇಳಿ, ಜಗತ್ತಿನಲ್ಲಿ ಹುಟ್ಟಿ ಬಂದ ಎಲ್ಲರಿಗೂ ಒಂದಲ್ಲ ಒಂದು ರೀತಿ ಇದ್ದೇ ಇರುತ್ತದೆ! ಆದರೂ ಅದನ್ನೆಲ್ಲ ತಾತ್ಕಾಲಿಕವಾಗಿ ಮರೆತು ನಗುವೆಂಬ ಮುಲಾಮನ್ನು ಸವರಿ ಮುಂದೆ ಸಾಗುತ್ತೇವೆ!

ದೂರದ ಬೆಟ್ಟ ನುಣ್ಣಗೆ ಎನ್ನುವಂತೆ ಜೀವನ,ನಗುತ್ತಾ, ಸಂತೋಷದಿಂದ ಮಾತಾಡುವವರೆಲ್ಲರಿಗೂ ಜೀವನದಲ್ಲಿ ನೋವೇ ಇರುವುದಿಲ್ಲ ಎಂದಲ್ಲ ಕಣ್ರಿ, ಅವರದೇ ಆದ ವೈಯಕ್ತಿಕ ನೋವನ್ನು ಮನದಲ್ಲಿ ಮುಚ್ಚಿಟ್ಟು ಹೊರಗಿನ ವಾತಾವರಣದಲ್ಲಿ ನಗುತ್ತಿರುತ್ತಾರೆ ಅಷ್ಟೇ!

ಪ್ರತಿಯೊಂದು ನಗುವಿನ ಹಿಂದೆ ಒಂದು ನೋವಿನ ಕಥೆ ಅಡಗಿರುತ್ತದೆ, ಬರೆದರೆ ಪ್ರತಿಯೊಬ್ಬರೂ ತಮ್ಮ ಜೀವನ ಚರಿತ್ರೆ ಬರಿಯಬಹುದು ಅಷ್ಟು ತಗ್ಗು, ದಿನ್ನೆಗಳನ್ನು ದಾಟಿ ಅದರಿಂದ ಹೊರಬಂದು ತೋರಿಸಿಕೊಳ್ಳದೆ ಇರುವಂತಹ ಜಾಣತನ ಮನುಷ್ಯನಿಗೆ ಇದೆ ಅಲ್ವಾ ಅದು ಅಗಾಧವಾದದ್ದು!

ಅಳುವಾಗ ನೋವಿದೆ ಇವರಿಗೆ ಎಂದು ತಕ್ಷಣ ಗೊತ್ತಾಗುವ ಹಾಗೆ ನಗುವಿನಲ್ಲಿ ಅಡಗಿದ ನೋವನ್ನು ಕಂಡು ಹಿಡಿಯುವುದು ತುಂಬಾ ಕಷ್ಟ, ಅದ್ದರಿಂದಲೇ ಯಾರ ಅಂತರಾಳಕ್ಕೂ ನಾವು ಇಳಿಯಲು ಸಾಧ್ಯವಿಲ್ಲ,

ಯಾವಾಗಲೂ ಜೊತೆಗಿರುವ ನಮ್ಮ ಅಂತರಾಳವೇ ಒಂದೊಂದು ಬಾರಿ ಸರಿಯಾಗಿ ನಮಗೆ ಅರ್ಥವಾಗಿರುವುದಿಲ್ಲ, ಅಂತರಾಳದ ನೋವು ಅಷ್ಟು ನಿಗೂಢ!

ಆಗ ನಾನ್ಯಾಕೆ ಇಷ್ಟು ನೋವು ಪಡ್ತೀನಿ ಈ ವಿಷಯಕ್ಕೆ, ಬಿಟ್ಹಾಕಿದರೆ ಆಯ್ತಲ್ಲಾ ಎಂದು





ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳುತ್ತೇವೆ!

ಒಂದು ಸತ್ಯದ ವಿಷಯ ಇಲ್ಲಿ ಹೇಳ್ತೀನಿ,

ಒಬ್ಬರು ಆತ್ಮೀಯರು ತುಂಬಾ ಚೆನ್ನಾಗಿ ನಕ್ಕು ಮಾತನಾಡಿ ತಮ್ಮ ಮನೆಗೆ ಹೋಗಿರುತ್ತಾರೆ, ಸ್ವಲ್ಪ ದಿನದಲ್ಲೇ ಅವರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ, ಅಂದರೆ ಅವರು ಮನದ ನೋವನ್ನು ಯಾರೊಡನೆಯೂ ಹಂಚಿ ಕೊಂಡಿರುವುದು ಇಲ್ಲ ಎಂದಾಗುತ್ತದೆ, ಮುಖದಲ್ಲಿ ನಗುವಿದ್ದರೂ ಮನದಲ್ಲಿ ಹೆಪ್ಪುಗಟ್ಟಿದ ನೋವು ಅವರ ಜೀವನವನ್ನು ಕದ್ದು ಬಿಡುತ್ತದೆ, ಒಂದೊಂದು ಬಾರಿ ಸ್ವಂತ ಮನೆಯವರಿಗೂ ಕಾರಣ ತಿಳಿದಿರುವುದಿಲ್ಲ,

ಆಗ ನಮಗೆ ಆ ಶಾಕ್ ಎಷ್ಟೋ ದಿನಗಳವರೆಗೆ ವಿಷಯ ಮನವನ್ನ ಕಾಡುತ್ತದೆ ಎಂದರೆ ಆ ಆಘಾತದಿಂದ ಮನಸ್ಸು ಹೊರಬರುವುದೇ ಅಸಾಧ್ಯವೆನಿಸಿ ಬಿಡುತ್ತದೆ!

ಹೀಗೆ ಹೊರಗೆ ನಕ್ಕವರು ಒಳಗಿಟ್ಟುಕೊಂಡ ನೋವನ್ನು ತೋರ್ಪಡಿಸುವುದಿಲ್ಲ ನೋವಿನ ಜೊತೆಗೆ ಜೀವನ ಮಾಡಲು ಕಲಿಯುತ್ತಾರೆ, ಆದರೆ ಮನೋಸ್ಥೈರ್ಯ ಇಲ್ಲವಾದಲ್ಲಿ ಇಂತಹ ನಡೆಯಬಾರದ ದುರ್ಘಟನೆ ನಡೆಯುತ್ತದೆ!

ಹೀಗಾಗಿ ಯಾರಿಗೂ ನಾವು ಹೀಯಾಳಿಸಿ ಮಾತನಾಡಬಾರದು ಅವರ ನೋವಿಗೆ ಉಪ್ಪು ಸುರಿಯಬಾರದು, ಯಾರ ನೋವು ಎಷ್ಟು ಜೋರಾಗಿ ಎದೆಯಲ್ಲಿ ಅಚ್ಚು ಒತ್ತಿರುತ್ತದೆಯೋ ಗೊತ್ತಿಲ್ಲ, ಮೊದಲೇ ಅವರು ಸಂಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಾಗ ಜನರು ಅದನ್ನೇ ಕೆದಕಿ ಗಾಯ ಜಾಸ್ತಿ ಮಾಡಿದರೆ ಅವರ ಜೀವಕ್ಕೆ ಅಪಾಯ!

ಮನಸ್ಥಿತಿ, ಪರಿಸ್ಥಿತಿ ಸರಿ ಇಲ್ಲದಿದ್ದರೆ ನೆಮ್ಮದಿ ಪಲಾಯಾನ ಮಾಡುತ್ತದೆ, ಹೀಗಾಗಿ ನೆಮ್ಮದಿಯನ್ನು ಅವರವರೇ ತೆಗೆದುಕೊಳ್ಳಬೇಕು ಹೀಗಾಗಿ ಬೇರೆಯವರು ಆ ನೋವನ್ನು ಬೆಳೆಸಬಾರದು, ಸಮಾಧಾನ ಮಾಡಲು ಸಾಧ್ಯವಾದರೆ ಸರಿ ಇಲ್ಲದಿದ್ದರೆ ಕಾಲಕ್ರಮೇಣ ಕಡಿಮೆಯಾಗುವ ನೋವನ್ನು ಮತ್ತೆ ಮತ್ತೇ ಕೆದಕಬಾರದು!

ಒಬ್ಬೊಬ್ಬರ ನೋವು ನಮಗೆ ಸರಿಯಾಗಿ ಗೊತ್ತಿರುತ್ತದೆ ಅದಕ್ಕೆ ಉಪ್ಪು,ಖಾರ ಸೇರಿಸಿ ಜಾಸ್ತಿ ಮಾಡಿದರೆ ಅವರ ಜೀವನದ ಜೊತೆಗೆ ಸುತ್ತಲಿನ ವಾತಾವರಣದಲ್ಲಿ ಅದರ ಹೊಗೆ ಕಾಣಿಸುತ್ತದೆ ಹೀಗಾಗಿ ನಾವು ಒಬ್ಬರ ಹಿತೈಷಿಗಳು ಎಂದ ಮೇಲೆ ತಪ್ಪು ಸರಿಯನ್ನು ತಿಳಿದುಕೊಂಡು ಮುಂದೆ ಸಾಗಬೇಕು ಹೊರತು

ಯಾರೂ ಜೀವನದ ನೆಮ್ಮದಿಯನ್ನು ಹಾಳು ಮಾಡಿ ನಮ್ಮ ಜೀವನವನ್ನು ಕಟ್ಟಿಕೊಂಡರೆ ಅದು ಶಾಶ್ವತ ಸುಖವಲ್ಲ!

ಹೀಗಾಗಿ ಕಂಡವರ ನೋವು ನಮಗೆ ಸಣ್ಣದು ಅವರಿಗೆ ದೊಡ್ಡದು! ಮನಸ್ಸು ಎಂಬ ಭಾವನಾತ್ಮಕ ಶರಧಿಯಲ್ಲಿ ಮಿಂದೆದ್ದರೆ ಮಾತ್ರ ಇನ್ನೊಬ್ಬರ ನೋವಿಗೆ ನಾವು ಸ್ಪಂದಿಸುತ್ತೇವೆ!

ನಗು ಎನ್ನುವುದು ದೇವರು ಕೊಟ್ಟ ವರ, ನಗುವಿನಿಂದಲೂ ನೋವು ಆಗಿನ ಮಟ್ಟಿಗೆ ಕಡಿಮೆಯಾಗಿ ಮುಂದೆ ಕಷ್ಟವನ್ನು ಭರಿಸುವ ಶಕ್ತಿ ಬರುತ್ತದೆ!

ಒಂದು ಗಾದೆ ಮಾತು ಕೇಳಿದ್ದೀರಿ ಅಲ್ವಾ "ಬೀಸೋ ದೊಣ್ಣೆ ತಪ್ಪಿದರೆ ನೂರು ವರ್ಷ ಆಯಸ್ಸು ಅಂತ, ಈ ಮಾತು ಅಪ್ಪಟ ಸತ್ಯ, ಒಂದು ಕ್ಷಣ ನೋವನ್ನು ತೆಗೆದುಕೊಂಡರೆ ಅನಾಹುತಗಳು ಸಂಭವಿಸುವ ಸಾಧ್ಯತೆ ಕಡಿಮೆಯಾಗುತ್ತವೆ!

ಹೀಗಾಗಿ ಯಾರೇ ಆಗಲಿ ತುಂಬಾ ವೇದನೆ ಪಡುವಾಗ ನಾವು ಅದನ್ನು ಅಪಹಾಸ್ಯವಾಗಿ ತೆಗೆದುಕೊಳ್ಳಬಾರದು, ಏಕೆಂದರೆ ದೇವರು ನಮ್ಮನ್ನು ಯಾವಾಗಲೂ ಸುಖವಾಗಿಯೇ ಇಡುತ್ತಾನೆ ಎಂದು ಹೇಳಿಲ್ಲ ಅಲ್ಲವೇ!

ಹೀಗಾಗಿ ನೋವಿನಲ್ಲೂ ನಗುವವರ ಮನಸ್ಥಿತಿ ಅರ್ಥವಾಗಿದ್ದರೆ ಅವರಿಗೆ ಜೊತೆಯಾಗಿ ನಿಲ್ಲಿ, ಸಾಧ್ಯವಾದರೆ ಅವರ ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸಿ ಇದರಿಂದ ನಿಮ್ಮ ಗೌರವ ಹೆಚ್ಚುತ್ತದೆ ಹೊರತು ಕಡಿಮೆಯಾಗುವುದಿಲ್ಲ!

---

# ಅಭಿನಯದ ಅಮರ ಚೇತನ: ಹೀತ್ ಲೆಡ್ಜರ್



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಯಶಸ್ಸು ಕೇವಲ ಅದೃಷ್ಟವಲ್ಲ; ಅದು ಬಿಡದ ದುಡಿಮೆ ಮತ್ತು ನಿರಂತರ ಹೋರಾಟದ ಫಲ. ವಿಶ್ವ ಸಿನಿಮಾ ರಂಗದ ಮರೆಯದ ನಟ ಹೀತ್ ಲೆಡ್ಜರ್ ಇದಕ್ಕೆ ದೊಡ್ಡ ಸಾಕ್ಷಿ. ತೆರೆಯ ಮೇಲೆ ಕೇವಲ ಸುಂದರ ಮುಖವಾಗಿ ಉಳಿಯದೆ, ನಟನೆಯ ಮೂಲಕವೇ ಹೊಸ ದಾಖಲೆ ಬರೆಯಬೇಕೆಂಬ ಕನಸು ಅವರಲ್ಲಿತ್ತು. ಆದರೆ ಈ ಸಾಧನೆಯ ದಾರಿ ಸುಲಭವಾಗಿರಲಿಲ್ಲ.

ಅಮೆರಿಕಕ್ಕೆ ಬಂದ ಹೊಸದರಲ್ಲಿ, ಹಣದ ತೊಂದರೆ ಇದ್ದರೂ ಅವರು ಸಣ್ಣಪುಟ್ಟ ಪಾತ್ರಗಳನ್ನು ಒಪ್ಪಲಿಲ್ಲ. ತನಗೆ ಸವಾಲು ಹಾಕುವ, ಮನಸಿಗೆ ಹಿಡಿಸುವ ಪಾತ್ರಕ್ಕಾಗಿ ತಾಳ್ಮೆಯಿಂದ ಕಾದರು. ಆ ಹಠವೇ ಅವರಿಗೆ ದಿ ಡಾರ್ಕ್ ನೈಟ್ ಚಿತ್ರದ ಜೋಕರ್ ಎಂಬ ಮರೆಯಲಾಗದ ಪಾತ್ರವನ್ನು ತಂದುಕೊಟ್ಟಿತು.

ಆ ಪಾತ್ರಕ್ಕಾಗಿ ಅವರು ಮಾಡಿದ ತಯಾರಿ ಅಪರೂಪದ್ದು. ಆರು ವಾರಗಳ ಕಾಲ ಹೋಟೆಲ್ ಕೋಣೆಯಲ್ಲಿ ಒಬ್ಬಂಟಿಯಾಗಿ ಉಳಿದು, ಜೋಕರ್‌ನ ಮನಸಿನ ನೋವು, ಕೋಪವನ್ನು ಅರ್ಥಮಾಡಿಕೊಂಡರು. ಭಯ ಹುಟ್ಟಿಸುವ ನಗು, ಗಂಭೀರ ಧ್ವನಿ, ಮುಖದ ಮೇಲಿನ ಗಾಯದ ಗುರುತುಗಳ ಮೂಲಕ ಅವರು ಜೋಕರ್ ಪಾತ್ರಕ್ಕೆ ಪೂರ್ಣ ಜೀವ ಕೊಟ್ಟರು.



ಸ್ಫೂರ್ತಿ ಸುಧೆ - 32

ಕೇವಲ 28ನೇ ವಯಸ್ಸಿನಲ್ಲಿ ಅವರು ನಮ್ಮನ್ನು ಅಗಲಿದರೂ, ಅವರ ಶ್ರದ್ಧೆಗೆ ಸಾವಿನ ನಂತರ ಆಸ್ಕರ್ ಪ್ರಶಸ್ತಿ ಸಿಕ್ಕಿತು. ಟೀಕೆಗಳಿಗೆ ಹೆದರದೆ, ಕಲೆಯನ್ನೇ ಉಸಿರಾಗಿಸಿಕೊಂಡ ಲೆಡ್ಜರ್ ನಮಗೆ ಕಲಿಸುವ ಪಾಠ ಒಂದೇ: ನಾವು ಮಾಡುವ ಕೆಲಸವನ್ನು ಪ್ರೀತಿಯಿಂದ, ಪೂರ್ಣ ಮನಸಿನಿಂದ ಮಾಡಿದರೆ ನಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಕಷ್ಟವನ್ನು ಗೆಲ್ಲುವ ಛಲ ಇರುವ ಪ್ರತಿಯೊಬ್ಬರಿಗೂ ಹೀತ್ ಲೆಡ್ಜರ್ ದೊಡ್ಡ ಸ್ಫೂರ್ತಿ.

---

# ಉಪನ್ಯಾಸಕ ವೃತ್ತಿ ಆತ್ಮಸಂತೃಪ್ತಿ ತಂದಿದೆ

## ನಿವೃತ್ತ ಉಪನ್ಯಾಸಕ ಕೆ.ಪಿ. ಮೃತ್ಯುಂಜಯರಿಗೆ ಸನ್ಮಾನ

**ಮಂಡ್ಯ:** ಉಪನ್ಯಾಸಕ ವೃತ್ತಿ ತನ್ನ ಜೀವನದಲ್ಲಿ ಆತ್ಮಸಂತೃಪ್ತಿ ತಂದಿದ್ದು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಭಾಗಿಯಾಗಿರುವುದು ಹೆಮ್ಮೆಯ ಸಂಗತಿ ಎಂದು ನಿವೃತ್ತ ಕನ್ನಡ ಉಪನ್ಯಾಸಕರಾದ ಕೆ.ಪಿ. ಮೃತ್ಯುಂಜಯ ಅಭಿಪ್ರಾಯಪಟ್ಟರು.

ನಗರದ ಅರ್ಕೇಶ್ವರ ನಗರದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಅವರನ್ನು ಕೆ.ಟಿ.ಹೆಚ್. ಕನ್ನಡ ಬಳಗದ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಈ ವೇಳೆ ಮಾತನಾಡಿದ ಅವರು, ತಮ್ಮ ಸೇವಾ ಅವಧಿಯಲ್ಲಿ ಸಾಧ್ಯವಾದಷ್ಟು ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಮಹತ್ವ ತಿಳಿಸಿ, ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಉದ್ಯೋಗ ಪಡೆದು ಉತ್ತಮ ನಾಗರಿಕರಾಗಿ ರೂಪುಗೊಳ್ಳುವಂತೆ ಪ್ರೇರೇಪಿಸಿರುವುದು ಸಂತೋಷ ತಂದಿದೆ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಕೆ.ಟಿ.ಹೆಚ್. ಬಳಗದ ಕೆ.ಟಿ. ಹನುಮಂತು, ಪ್ರಾಂಶುಪಾಲ ಹನುಮಂತಯ್ಯ, ಅಧ್ಯಾಪಕ ಡಾ. ಹುಸ್ಕೂರು ಕೃಷ್ಣೇಗೌಡ, ಉಪನ್ಯಾಸಕ ಕುಮಾರ್ ಹಾಗೂ ಜಿಲ್ಲಾ ಕೃಷಿಕ ಸಮಾಜದ ಉಪಾಧ್ಯಕ್ಷ ಜಿ. ಧನಂಜಯ (ಧನಸಗುಪ್ಪೆ) ಉಪಸ್ಥಿತರಿದ್ದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,